(ii) re. Constitution of Taluk Coordination Committee in each Taluk for examining and taking up developmental works:

SRI B. G. BANAKAR (Hirekerur).—I beg to move :

"That this Assembly is of the opinion that in every taluk, a Taluk Co-ordination Committee be constituted with the following persons as members and the local member of the Legislature as Chairman and the Tahsildar as convenor, to examine and take up the developmental works effectively, to provide necessary relief in respect of demands and grievances of the people and to implement the programmes and policies of the Government properly :

1	President, T.D B.	Members
2	President T.A,P.M.C.S.	,,
3	President, Taluk Land Development Bank	,,
4	President, T.A.P.M.C.	,,
5	President Taluk Harijan-Girijan Housing Co-operative Society	,,
6	Chairman. Village Panchayats	,,
7	Officer of the Taluk Central Co-operative Bank	,,
8	Assistant Engineer, P.W.D.	,,
9	Assistant Engineer, K. S. E. B.	,,
10	Assistant Educational Officer	,,
11	Assistsot Veterinary Surgeon	,,
12	Forest Range Officer	,,
13	Block Development Officer	,,
14	President of the Recognised political parties	,,
15	Medical Officer	,,

MR. DEPUTY SPEAKER.—Resolution moved :—

"That this Assembly is of the opinion that in every taluk, a Taluk Co-ordination Committee be constituted with the following persons as members and the local member of the Legislature as Chairman and the Tahsildar as Convenor, to examine and take up the developmental works effectively, to provide necessary relief in respect of demands and grievances of the people and to implement the programmes and policies of the Government properly :—

1	President, T.D.B.	Members
2	President T A.P.M C.S.	,,
3	President, Taluk Land Development Bank	,,
4	President, T.A.P.M C.	,,
5	President, Taluk Harijan-Girijan Housing Co-operative Society	,,
6	Chairman, Village Panchayats	,,
7	Officer of the Taluk Central Co-operative Bank	,,
8	Assistant Engineer, P.W D.	,,
9	Assistant Engineer, K.S.E.B.	,,

10	Assistant Educational Officer	Members
11	Assistant Veterinary Surgeon	,,
12	Forest Range Officer	,,
13	Block Development Officer	,,
14	President of the Recognised Political Parties	,,
15	Medical Officer	,,

† ಶ್ರೀ ಬಿ. ಜಿ ಬಣಕಾರ್ —ಸನ್‌ಮಾನ್ಯ ಸಭಾಪತಿಗಳೇ ರಾಜ್ಯಸರ್ಕಾರದವರು ಕೋಟ್ಯಾಂತರ ರೂಪಾಯಿಗಳ ಹಣವನ್ನು ರಾಜ್ಯದ ಅಭಿವೃದ್ಧಿಗಾಗಿ ಖರ್ಚುಮಾಡುತ್ತಾ ಇದ್ದಾರೆ, ಅನೇಕ ಅಭಿವೃದ್ಧಿ ಕಾರ್ಯಗಳನ್ನು ರಾಜ್ಯದಾದ್ಯಂತ ಸರ್ಕಾರದವರು ಮಾಡುತ್ತಾ ಇದ್ದಾರೆ. ಈ ಅಭಿವೃದ್ಧಿ ಕಾರ್ಯಗಳು ಸುಗಮವಾಗಿ ಹಾಗೂ ಸರ್ಕಾರದ ಅನೇಕ ತರಹ ಯೋಜನೆಗಳು ಸಫಲವಾಗಬೇಕಾಗಿದ್ದಲ್ಲಿ ಆದಷ್ಟು ಉತ್ತಮ ರೀತಿಯಲ್ಲಿ ಕಾರ್ಯಗತವಾಗಬೇಕಾದರೆ, ತಾಲ್ಲೂಕಿನಾದ್ಯಂತ ಸ್ಥಳೀಯವಾಗಿ, ಗ್ರಾಮಾಂತರ ವಾಗಿ ಯಾವ ಯಾವ ಕಾರ್ಯಕ್ರಮಗಳು ಇವೆ, ಅವು ಸಮಗ್ರವಾಗಿ ನಡೆಯುವಂತೆ ಆಗಬೇಕಾದರೆ ತಾಲೂಕು ಮಟ್ಟದಲ್ಲಿ ಜವಾಬ್ದಾರಿಯನ್ನು ಹೊತ್ತಿರುವಂತಹ ಅಧಿಕಾರಿಗಳು ಕಾರ್ಯದರ್ಶಿಗಳು, ಅನೇಕ, ಸಂಘಸಂಸ್ಥೆಗಳ ಅಧ್ಯಕ್ಷರು ಹಾಗೂ ಅಲ್ಲಿಯ ಪ್ರತಿನಿಧಿಗಳಾಗಿ ಇರತಕ್ಕ ಎಲ್ಲ ಶಾಸಕರು ಆದರ ಮೇಲ್ವಿಚಾರಣೆ ಯನ್ನು ನೋಡತಕ್ಕಂಥಾದ್ದಾಗಿರುತ್ತದೆ. ಆ ಬಗ್ಗೆ ಸಲಹಾ ಸಮಿತಿಗಳನ್ನು ಏರ್ಪಡಿಸಿ ಸಾರ್ವಜನಿಕರಿಗೆ ಕಂಡುಬರುವಂಥ ಅನೇಕ ಲೋಪದೋಷಗಳನ್ನು ಕಂಡುಕೊಂಡು ಅವುಗಳಿಗೆ ಪರಿಹಾರ ಸೂಚಿಸುವ ಉತ್ತಮಕಾರ್ಯ ಸ್ಥಳೀಯ ಶಾಸಕರ ಆದ್ಯ ಕರ್ತವ್ಯವಾಗಿರುತ್ತದೆ. ಇದೇ ರೀತಿಯಲ್ಲಿ ಅಧಿಕಾರಿಯು ಶಾಸಕರು ಸರ್ಕಾರದ ಧೋರಣೆ ಮತ್ತು ನೀತಿಯನ್ನು ನಿರೂಪಿಸುವುದರಲ್ಲಿ ಜವಾಬ್ದಾರರಾಗಬೇಕು ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದು ಸಮಾಲೋಚನೆ ಸಮಿತಿ ಇರಬೇಕೆಂದು ನನ್ನ ಅಭಿಪ್ರಾಯ. ಇಂಥ ಒಂದು ಸಮಿತಿಯಲ್ಲಿ ಸ್ಥಳೀಯ ಶಾಸಕರು ಅಧ್ಯಕ್ಷರಾಗಿದ್ದರೆ ತಾಲ್ಲೂಕಿನ ಯಾವತ್ತು ಕಾರ್ಯಕ್ರಮಗಳು ಸರ್ಕಾರಿ ಧೋರಣೆಗಳು ಕಾರ್ಯಗತವಾಗುತ್ತವೆಯೋ ಇಲ್ಲವೋ ಎಂಬುದನ್ನು ನೋಡುವಲ್ಲಿ ಅವರ ಜವಾಬ್ದಾರಿ ಇರುತ್ತದೆ. ಈ ದೃಷ್ಟಿಯಿಂದ ಆಯಾ ತಾಲೂಕಿನ ಶಾಸಕರು ಸಮಿತಿಯ ಅಧ್ಯಕ್ಷರಾಗಿರಬೇಕು ಎನ್ನುವ ಅಭಿಪ್ರಾಯವನ್ನು ತಿಳಿಸಬಯಸುತ್ತೇನೆ. ಇಂಥ ಸಮಿತಿಯಲ್ಲಿ ಕೆಳಕಂಡ ಸದಸ್ಯರು ಏತಕ್ಕೆ ಇರಬೇಕು ಎಂಬುದು ಕೂಡ ಮಹತ್ವದ ಸಂಗತಿ.

(1) ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು, (2) ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಹಕಾರಿ ಸಂಘದ ಅಧ್ಯಕ್ಷರು. (3) ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು, (4) ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟಕಟ್ಟೆ ಸಂಘದ ಅಧ್ಯಕ್ಷರು, (5) ತಾಲ್ಲೂಕು ಹರಿಜನ ಗಿರಿಜನ ಗೃಹನಿರ್ಮಾಣ ಸಹಕಾರೀ ಸಂಘದ ಅಧ್ಯಕ್ಷರು, (6) ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳು, (7) ತಾಲ್ಲೂಕು ಕೇಂದ್ರ ಸಹಕಾರಿ ಬ್ಯಾಂಕಿನ ಅಧಿಕಾರಿಗಳು, (8) ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನೀಯರವರು, (9) ಕರ್ನಾಟಕ ರಾಜ್ಯದ ನಿದ್ಯುಚ್ಛಕ್ತಿ ಮಂಡಲಿಯ ಸಹಾಯಕ ಇಂಜನೀಯರವರು, (10) ಸಹಾಯಕ ಶಿಕ್ಷಣಾಧಿಕಾರಿಗಳು, (11) ಸಹಾಯಕ ಪಶುವೈದ್ಯರು, (12) ಅರಣ್ಯ ವಲಯಾಧಿಕಾರಿಯವರು, (13) ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು, (14) ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಧ್ಯಕ್ಷರುಗಳು, (15) ವೈದ್ಯಾಧಿಕಾರಿಯವರು.

ಈ ಕಮಿಟಿಯಲ್ಲಿ ಮೊದಲನೆಯದಾಗಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೇ ಇರಬೇಕು ಎಂದು ಸಲಹೆ ಇದೆ. ತಾಲ್ಲೂಕ್ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು ಏತಕ್ಕೆ ಇರಬೇಕು ಎಂದರೆ ತಾಲೂಕ್ ಅಭಿವೃದ್ಧಿ ಮಂಡಳಿಯ ಮುಖಾಂತರ ತಾಲೂಕ್ ಬೋರ್ಡ್‌ಗಳು ಅನೇಕ ಕೆಲಸ ಕಾರ್ಯ ಗಳನ್ನು ತೆಗೆದುಕೊಂಡು ಮಾಡುತ್ತಿರುತ್ತಾರೆ. ಆದರಂತೆ ಸರ್ಕಾರದವರು ಗ್ರಾಂಟುಗಳನ್ನು ಜಿಲ್ಲಾಧಿಕಾರಿ ಗಳ ಮುಖಾಂತರ ಪ್ರತಿಯೊಂದು ತಾಲ್ಲೂಕಿಗೂ ಕೊಡುತ್ತಾರೆ, ಎಲ್ಲ ಕಾರ್ಯಗಳನ್ನು ಸುಗಮವಾಗಿ ನಡೆಸಿ ಕೊಡು ಹೋಗುವಂತಾದ್ದು. ಆಗಿದಾಗ್ಗೆ ಸೂಪರ್‌ವಿಷನ್ ಮಾಡುವುದು ತಾಲ್ಲೂಕ್ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು ಏನು ಇದ್ದಾರೆ ಅವರ ಜವಾಬ್ದಾರಿ, ಹೊಣೆಗಾರಿಕೆಯಾಗಿರುವುದರಿಂದ ಅವರೂ ಕೂಡ ಈ ಸಮಿತಿಯಲ್ಲಿ ಇರಬೇಕೆಂದು ಅಭಿಪ್ರಾಯ ಪಡುತ್ತೇನೆ, ಎರಡನೆಯದಾಗಿ ತಾಲ್ಲೋಕ್ ವ್ಯವಸಾಯ ಉತ್ಪನ್ನ ಸಹಕಾರಿ ಮಂಡಳದ ಅಧ್ಯಕ್ಷರು ಇವರೂ ಕೂಡ ಇರಬೇಕು. ತಾಲ್ಲೂಕಿನಾ ದ್ಯಂತ ರೈತರಿಗೆ ಉಪಯೋಗವಾಗುವಂತಹ ಗೊಬ್ಬರ, ಕಬ್ಬಿಣ, ಉಕ್ಕಿನ ಸಾಮಾನುಗಳು ಮತ್ತಿತರ ಗೃಹೋಪಯೋಗಿ ಸಾಮಾನುಗಳನ್ನು ಅವರಿಗೆ ಯೋಗ್ಯ ಬೆಲೆಗೆ, ಕಡಿಮೆ ಬೆಲೆಗೆ ಒದಗಿಸಿಕೊಡುವುದು

ಮಾರಾಟ ಸಹಕಾರ ಸಂಘದ ಒಂದು ಕರ್ತವ್ಯ. ಅದೂ ಅಲ್ಲದೆ ರೈತರು ಬೆಳೆದಂಥ ಫಸಲು ಏನಿದೆ ಅದಕ್ಕೆ ಯೋಗ್ಯ ಹಾಗೂ ಹೆಚ್ಚಿನ ಬೆಲೆ ಬರುವಂತೆ ಮಾರಾಟ ಮಾಡಿಸುವುದು ಅವರ ಕರ್ತವ್ಯವಾಗಿರುತ್ತದೆ. ಆದುದರಿಂದ ತಾಲ್ಲೂಕು ಅಭಿವೃದ್ಧಿ ಸಹಕಾರ ಮಾರಾಟ ಸಂಘದ ಅಧ್ಯಕ್ಷರು ಇದರಲ್ಲಿ ಇರಬೇಕು. ಅವರು ರೈತರಿಗೆ ಬೇಕಾಗುವಂತಹ ಅನುಕೂಲತೆಗಳನ್ನು ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ.

ಆಮೇಲೆ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರೂ ಇದರಲ್ಲಿ ಇರಬೇಕು. ಈ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕ್ ಏನಿದೆ ಇದು ಇಡೀ ರಾಜ್ಯದ ತಾಲ್ಲೂಕು ಅಭಿವೃದ್ಧಿಯ ಮೇಲೆ ಇರುತ್ತದೆ. ಭೂ ಅಭಿವೃದ್ಧಿ ಬ್ಯಾಂಕಿನ ಮುಖಾಂತರ ಲಕ್ಷಾಂತರ ರೂಪಾಯಿ ಹಣವನ್ನು ದೀರ್ಘಾವಧಿ ಸಾಲ ಕೊಟ್ಟು ಪಂಪ್‌ಸೆಟ್ಟುಗಳನ್ನು ಕೊಳ್ಳಲಿಕ್ಕೆ, ಭಾವಿಗಳನ್ನು ತೋಡಲಿಕ್ಕೆ, ಟ್ರ್ಯಾಕ್ಟರ್‌ಗಳನ್ನು ತೆಗೆದುಕೊಳ್ಳಲಿಕ್ಕೆ ಹೀಗೆ ಇನ್ನೂ ಅನೇಕ ತರಹದಲ್ಲಿ ಎಕ್ಕಲುತನದ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಕ್ಕೆ ಅವರಿಗೆ ದೊಡ್ಡ ಪ್ರಮಾಣದಲ್ಲಿ ಸಾಲವನ್ನು ಕೊಟ್ಟಿರುತ್ತಾರೆ. ಕೆಲವು ಕಡೆ ಸರಿಯಾಗಿ ಕೊಡುತ್ತಾರೆ, ಕೆಲವು ಕಡೆ ಸರಿಯಾಗಿ ಕೊಡಲಿಕ್ಕೆ ಇರುವುದಿಲ್ಲ. ಆದುದರಿಂದ ಅವರೂ ಕೂಡ ಈ ಸಮಿತಿಯಲ್ಲಿದ್ದರೆ ಅವರು ರೈತರ ಕುಂದುಕೊರತೆಗಳು ಏನು, ಇರುವ ತೊಂದರೆ ಏನು ? ಅವರಿಗೆ ಬೇಕಾಗಿರುವುದು ಏನು ಎಂಬುದನ್ನು ನೋಡಿ ಅವರು ಹೇಳುವುದಕ್ಕೆ ಅನುಕೂಲವಾಗುವುದೆಂದು ಅವರೂ ಕೂಡ ಈ ಸಮಿತಿಯಲ್ಲಿದ್ದರೆ ಬಹಳ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ಇದೂ ಅಲ್ಲದೆ ಅನೇಕ ಕಡೆಗಳಲ್ಲಿ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಸರಿಯಾಗಿ ಕೆಲಸಮಾಡದೇ ಇದ್ದ ಪಕ್ಷದಲ್ಲಿ ಸಮಿತಿಯ ಅಧ್ಯಕ್ಷರು ಆ ಬ್ಯಾಂಕ್‌ಗಳಲ್ಲಿ ಕಂಡುಬರುವ ಲೋಪದೋಷಗಳು ಏನಿವೆ ಅವುಗಳನ್ನು ಸರಿಪಡಿಸಿಕೊಳ್ಳಬಹುದು. ಮತ್ತು ಜನರಿಗೆ ಎಂಥ ಅನುಕೂಲಗಳನ್ನು ಮಾಡಬೇಕು ಎಂಬುದನ್ನು ಹೇಳಲಿಕ್ಕೆ ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳಬೇಕು ಎಂದರೆ ರಾಜ್ಯ ಸರ್ಕಾರದವರು ಭೂ ಅಭಿವೃದ್ಧಿ ಬ್ಯಾಂಕ್‌ನ ಸದಸ್ಯರಾಗಿದ್ದಾರೆ. ಅನೇಕ ಹಿಂದುಳಿದ ಹರಿಜನಗಿರಿಜನ ಮತ್ತು ಸಂಚಾರಿ ಜನರಿಗೆ ಲಕ್ಷಾಂತರ ರೂಪಾಯಿ ಹಣವನ್ನು ಇಡೀ ರಾಜ್ಯದಲ್ಲಿ ಕೊಟ್ಟಿರು. ಅನೇಕ ಕಡೆ ನೋಡಿದರೆ ಹರಿಜನಗಿರಿಜನರಿಗೆ ಕೊಟ್ಟಂತಹ ಹಣದಲ್ಲಿ ಅವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳದೇ ಅನೇಕ ಬ್ಯಾಂಕ್‌ಗಳಲ್ಲಿ ಅದನ್ನು ಸಸ್ಪೆನ್ಸ್ ಹಣವಾಗಿ ಇಟ್ಟಿರತಕ್ಕಂಥ ಪ್ರಸಂಗಗಳು ಬೇಕಾದಷ್ಟು ಇವೆ. ಅಂಥ ಪ್ರಸಂಗದಲ್ಲಿ ಸ್ಥಳೀಯ ಶಾಸಕರ ಜವಾಬ್ದಾರಿ ಇರುವುದರಿಂದ ಆ ಜನತೆಯ ಕಲ್ಯಾಣವನ್ನು ಬಯಸಬೇಕು. ಸರ್ಕಾರದಿಂದ ಬಂದಂಥ ಹಣವನ್ನು ಸದ್ವಿನಿಯೋಗ ಮಾಡಿ ಪ್ರತಿಯೊಬ್ಬರನ್ನೂ ಕೂಡ ಸದಸ್ಯರನ್ನಾಗಿ ಮಾಡಿಕೊಳ್ಳಿ ಪ್ರತಿಯೊಬ್ಬರಿಗೂ ಕೂಡ ಈ ಹಣವನ್ನು ಕೊಟ್ಟು ಕಮಿಟಿಗಳಲ್ಲಿ ಈ ಪ್ರಶ್ನೆಯನ್ನು ಬಗೆಹರಿಸುವುದು ಅವಶ್ಯಕನಾಗಿರುವುದರಿಂದ ಭೂ ಅಭಿವೃದ್ಧಿ ಬ್ಯಾಂಕ್‌ನ ಸದಸ್ಯರು ಈ ಸಮಿತಿಯ ಸದಸ್ಯರಾಗಿರುವುದು ಅತ್ಯವಶ್ಯ.

ಇನ್ನು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಯ ಛೇರ್ಮನರವರೂ ಕೂಡ ಇಲ್ಲಿ ಇರಬೇಕು ಎನ್ನುವುದನ್ನು ಹೇಳಬಯಸುತ್ತೇನೆ. ಇಡೀ ರಾಜ್ಯದಲ್ಲಿ ಅನೇಕ ರೈತರುಗಳು ತಾವು ಬೆಳೆದಂಥ ಫಸಲನ್ನು ಮಾರ್ಕೆಟ್‌ಗೆ ತಂದಾಗ ರೈತರನ್ನು ಶೋಷಣೆ ಮಾಡುವಂಥ ಸಂಗತಿ ಸರ್ಕಾರದ ನಜರಿಗೆ ಬಂದಾಗ ಸರ್ಕಾರದವರು ಎಲ್ಲಾ ಕಡೆ ಮಾರ್ಕೆಟಿಂಗ್ ಸಮಿತಿಗಳನ್ನು ಸ್ಥಾಪಿಸಿ ರೈತರು ತಂದ ಫಸಲನ್ನು ಉತ್ತಮ ರೀತಿಯಲ್ಲಿ ತೂಕ ಮಾಡಿ ಅಧಿಕೃತವಾದ ಲೈಸೆನ್ಸ್‌ದಾರರ ಮುಖಾಂತರ ಅದನ್ನು ಖರೀದಿ ಮಾಡಲಿಕ್ಕೆ ಒಳ್ಳೆಯ ಅನುಕೂಲವನ್ನು ಮಾಡಿದ್ದೀರಿ. ಅನೇಕ ತಾಲ್ಲೂಕುಗಳಲ್ಲಿ ಮಾರ್ಕೆಟ್ ಸಮಿತಿಗಳು ಕೆಲಸ ಮಾಡದೇ ವ್ಯಾಪಾರಸ್ಥರ ಕೈಯಲ್ಲಿ ಇವೆ. ಇನ್ನೂ ಅನೇಕ ಕಡೆ ಅನೇಕ ಜನರು ಲೈಸೆನ್ಸ್ ಇಲ್ಲದೇ ಮಾರ್ಕೆಟ್‌ಗಳಲ್ಲಿ ಬಂದು ಹೆಚ್ಚಿನ ತೂಕ ತೆಗೆದುಕೊಳ್ಳುತ್ತಾರೆ. ಇಂಥ ಅವ್ಯವಹಾರಗಳು ಕಂಡುಬಂದಾಗ ಮಾರ್ಕೆಟಿಂಗ್ ಕಮಿಟಿಯ ಅಧ್ಯಕ್ಷರು, ಸ್ಥಳೀಯ ಶಾಸಕರು, ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಲಿ, ಅಥವಾ ಇನ್ನು ಯಾವುದೇ ಕಮಿಟಿಯ ಅಧ್ಯಕ್ಷರಾಗಲಿ ಇದನ್ನು ಸುಧಾರಿಸಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ಮಾರ್ಕೆಟಿಂಗ್ ಕಮಿಟಿಯ ಛೇರ್ಮನಗಳಿಗೆ ಬಂದಂಥ ಅನೇಕ ತೊಂದರೆ ತೊಡಕುಗಳು ಏನಾದರೂ ಕಂಡು ಬಂದರೆ ಅವರು ಈ ಸಮನ್ವಯ ಸಮಿತಿಯಲ್ಲಿ ಹೇಳಿ ಬಗೆಹರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ; ಎನ್ನುವ ಮಾತನ್ನು ಕೂಡ ಇಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಐದನೆಯದಾಗಿ ತಾಲ್ಲೂಕಿನ ಹರಿಜನ ಗಿರಿಜನರ ಗೃಹನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರು ಇಲ್ಲಿ ಇರಬೇಕು. ಏಕೆಂದರೆ ರಾಜ್ಯದಲ್ಲಿ ಹರಿಜನ ಗಿರಿಜನರಿಗೆ ಮನೆ ಕಟ್ಟಿಕೊಳ್ಳಲು ಸಹಕಾರ ಸಂಘದ ಮುಖಾಂತರ ದೊಡ್ಡ ಪ್ರಮಾಣದಲ್ಲಿ ಹಣವನ್ನು ಸರ್ಕಾರದವರು ಕೊಟ್ಟಿದ್ದಾರೆ. ಕೆಲವು ಕಡೆ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ ಮತ್ತೆ ಕೆಲವು ಕಡೆ ಕೆಲಸಮಾಡುತ್ತಿಲ. ಎಲ್ಲಿ ಹರಿಜನರಿಗೆ ಅನೇಕರಿಗೆ ಸಾಲ ಸಿಕ್ಕಿಲ್ಲವೋ ಅವರಿಗೆ ಯಾವರೀತಿಯಲ್ಲಿ ಸಾಲ ಒದಗಿಸಿಕೊಡಬೇಕು, ಅವರಿಗೆ ಯಾವ ರೀತಿ

ಹಣವನ್ನು ಕೊಡಿಸಿದರೆ ಅವರ ಒಂದು ಅಭಿವೃದ್ಧಿ ಆದೀತು ಮತ್ತು ಅವರಿಗೆ ಮನೆ ಕಟ್ಟಿಕೊಳ್ಳಲಿಕ್ಕೆ ಸಹಾಯಧನ ಸಿಕ್ಕೀತು ಎನ್ನುವ ಮಾತನ್ನು ಸಮಿತಿಯಲ್ಲಿ ಎಲ್ಲರೂ ಹೇಳಿದರೆ ಅದನ್ನು ಸರಿಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಇದರಿಂದ ಹರಿಜನ ಗಿರಿಜನರ ಅಭಿವೃದ್ಧಿಯನ್ನು ನೋಡಬೇಕಾದರೆ, ಅವರ ಮನೆಗಳನ್ನು ಉತ್ತಮ ರೀತಿಯಲ್ಲಿ ಕಟ್ಟಿಸಿಕೊಡಬೇಕಾದರೆ ಹರಿಜನ ಗಿರಿಜನರ ಸಹಕಾರ ಸಂಘದ ಅಧ್ಯಕ್ಷರೂ ಕೂಡ ಇದರಲ್ಲಿ ಸದಸ್ಯರಾಗಿರುವುದು ಅವಶ್ಯಕವೆಂದು ಹೇಳಬಯಸುತ್ತೇನೆ.

ಇನ್ನು ಗ್ರಾಮಪಂಚಾಯ್ತಿಯ ಅಧ್ಯಕ್ಷರೂ ಕೂಡ ಇದರಲ್ಲಿ ಸದಸ್ಯರಾಗಿರುವುದು ಅವಶ್ಯಕ. ಏಕೆಂದರೆ ಪ್ರತಿಯೊಂದು ಗ್ರಾಮ ಪಂಚಾಯ್ತಿಯ ಹೆಸರಿನಲ್ಲೂ ರಸ್ತೆಗಳನ್ನು ಮಾಡಿಸುವುದು, ಕುಡಿಯುವ ನೀರಿನ ಭಾವಿಗಳನ್ನು ಒದಗಿಸುವುದು, ಊರಿನಲ್ಲಿ ಪಾಠಶಾಲೆಗಳ ರಿಪೇರಿ, ಇನ್ನೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಇತ್ಯಾದಿ ಗ್ರಾಮಾಭಿವೃದ್ಧಿ ಕಾರ್ಯಗಳು ಇರುತ್ತವೆ. ಗ್ರಾಮ ಪಂಚಾಯ್ತಿಗಳಿಗೆ ಬಂದಿರುವ ತೊಂದರೆಗಳು ಏನು, ಗ್ರಾಮಪಂಚಾಯ್ತಿಗಳಲ್ಲಿ ವಸೂಲು ಆಗಬೇಕಾದ ಟ್ಯಾಕ್ಸ್ ಏತಕ್ಕೆ ವಸೂಲಾಗಲಿಲ್ಲ. ತಹಸೀಲ್ದಾರರು ವಿಲೇಜ್ ಆಕೌಂಟೆಂಟ್ ಮೂಲಕ ಡಿಮ್ಯಾಂಡ್ ಹೊಂಡಿಸಿದರೆ ಟ್ಯಾಕ್ಸ್ ವಸೂಲು ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳ ಬಹುದು. ಅನೇಕ ಗ್ರಾಮಗಳಲ್ಲಿ ಅನೇಕ ರೀತಿಯ ಅಲಕ್ಷ್ಯತೆ ಕಂಡುಬರುತ್ತದೆ. ಆಲ್ಲಿ ಪಂಚಾಯ್ತಿ ಅಧ್ಯಕ್ಷರು ತಮ್ಮ ತಮ್ಮ ಕುಂದುಕೊರತೆಗಳು ಏನು, ತಮಗೆ ಬರಬೇಕಾದ ಅನುಕೂಲತೆಗಳು ಏನು ಎನ್ನುವ ವಿಚಾರದಲ್ಲಿ ತಹಸೀಲ್ದಾರರ ಎದುರಿಗೆ ತಾಲ್ಲೂಕು ಅಭಿವೃದ್ಧಿ ಮಂಡಲಿ ಎದುರಿಗೆ ಹೇಳಿ ಪರಿ ಹಾರವನ್ನು ಪಡೆಯುವಂತಹ ಸಂದರ್ಭ ಇರುತ್ತದೆ. ಆದುದರಿಂದ ಪ್ರತಿಯೊಬ್ಬ ಗ್ರಾಮಪಂಚಾಯ್ತಿ ಅಧ್ಯಕ್ಷರೂ ಸೇರಿ ಪಂಚಾಯ್ತಿಯ ಅಭಿವೃದ್ಧಿಯ ಬಗ್ಗೆ ವಿಚಾರ ವಿನಿಮಯ ಮಾಡಿದರೆ ಎಲ್ಲರೂ ಉತ್ತಮ ಸಲಹೆಗಳನ್ನು ಕೊಡುವುದಕ್ಕೆ ಸಾಧ್ಯವಿದೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಗ್ರಾಮಪಂಚಾಯಿತಿ ಅಧ್ಯಕ್ಷರು ಈ ಸಮಿತಿಯಲ್ಲಿ ಇರಬೇಕು ಎನ್ನುವ ಮಾತನ್ನು ಹೇಳುತ್ತೇನೆ. ರಿಸರ್ವ್ ಬ್ಯಾಂಕ್‌ನವರು ಅಪೆಕ್ಸ್ ಬ್ಯಾಂಕ್‌ಗೆ ಕೋಟ್ಯಾಂತರ ರೂಪಾಯಿಗಳ ಹಣವನ್ನು ಕೊಡುತ್ತಾರೆ. ಇವರು ಜಿಲ್ಲಾ ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲವನ್ನು ಕೊಡುತ್ತಾರೆ. ತಾಲ್ಲೂಕಿನ ಕೇಂದ್ರ ಸಹಕಾರ ಬ್ಯಾಂಕು ಪ್ರತಿಯೊಬ್ಬ ರೈತನಿಗೂ ಸಾಲ ಕೊಟ್ಟಿದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕು. ರೈತ ಸ್ವಂತ ಮಾಲೀಕತನ ಮಾಡಲಿಕ್ಕೆ, ಸಾಲ ಸಿಕ್ಕಿದೆಯೋ ಇಲ್ಲವೋ ಎಂದು ನೋಡಿ, ಸಿಕ್ಕದೇ ಇದ್ದಪಕ್ಷದಲ್ಲಿ ಉಳಿದ ಜನರು ಬ್ಯಾಂಕಿನ ಹಿರಿಯ ಅಧಿಕಾರಿಗಳಿಗೆ ಹೇಳಿ ಹಣ ಕೊಡಿಸಲಿಕ್ಕೆ, ಪ್ರತಿಯೊಬ್ಬರಿಗೂ ಸಾಲ ಸಿಗುವಂತೆ ಪ್ರಯತ್ನ ಮಾಡಲಿಕ್ಕೆ ಸಾಧ್ಯವಿದೆ. ಯಾವುದಾದರೂ ಸಹಕಾರ ಸಂಘದಲ್ಲಿ ರೈತನನ್ನು ಸದಸ್ಯನನ್ನಾಗಿ ಮಾಡಿಕೊಂಡಿಲ್ಲ ಎಂದರೆ ಸದಸ್ಯರನ್ನಾಗಿ ಮಾಡಿಕೊಂಡು ಸಾಲ ಕೊಡಬೇಕು. ತಾಲ್ಲೂಕಿನಲ್ಲಿರುವಂಥ ಹೊಲ ಪಡೆದಂಥ ವ್ಯಕ್ತಿ ಸಹಕಾರ ಸಂಘಕ್ಕೆ ಸದಸ್ಯನಾಗಲೇಬೇಕು. ಒಕ್ಕಲುತನ ಅಭಿವೃದ್ಧಿಯ ಸಲುವಾಗಿ ಈ ಬ್ಯಾಂಕಿನ ಮುಖಾಂತರ ಸಾಲ ಕೊಡಿ ಎಂದು ಶಾಸಕರಾಗಲೀ, ಅಭಿವೃದ್ಧಿ ಮಂಡಲಿ ಅಧ್ಯಕ್ಷರಾಗಲೀ ಬ್ಯಾಂಕಿನ ಅಧಿಕಾರಿಗಳಿಗೆ ಹೇಳಲಿಕ್ಕೆ ಸಾಧ್ಯವಿದೆ. ಆದುದರಿಂದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧಿಕಾರಿಗಳೂ ಸಹ ಈ ಸಮನ್ವಯ ಸಮಿತಿಯಲ್ಲಿ ಇರಬೇಕು ಎನ್ನುವ ಮಾತನ್ನು ಹೇಳುತ್ತೇನೆ.

4-00 P. M.

ಇನ್ನು ಲೋಕೋಪಯೋಗಿ ಇಲಾಖೆಯ ಅಸಿಸ್ಟೆಂಟ್ ಇಂಜಿನಿಯರ್, ಪಿ. ಡಬ್ಲ್ಯೂ. ಡಿ. ಮಂಜೂರಾತಿಯ ಕೋಟ್ಯಾಂತರ ರೂಪಾಯಿ ಹಣವನ್ನು ನಮ್ಮ ರಾಜ್ಯದಲ್ಲಿ ಸರ್ಕಾರ ಖರ್ಚು ಮಾಡುತ್ತಿದೆ. ತಾಲ್ಲೂಕಿನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಇರುತ್ತಾರೆ. ಇವರು ಕೆಲಸ ಮಾಡುವಾಗ, ಯಾವ ಕೆರೆ ರಿಪೇರಿ ಮಾಡುತ್ತಾರೆ ಯಾವ ರಸ್ತೆ ರಿಪೇರಿ ಮಾಡುತ್ತಾರೆ, ಯಾವ ಕಟ್ಟಡ ರಿಪೇರಿ ಮಾಡುತ್ತಾರೆ, ಹೊಸದಾಗಿ ಯಾವ ಕೆಲಸ ತೆಗೆದುಕೊಂಡಿದ್ದಾರೆ, ಯಾವುದು ತೆಗೆದುಕೊಂಡಿಲ್ಲ–ಇದು ಯಾವುದೂ ಕೂಡ ಶಾಸಕರಿಗಾಗಲೀ, ಅಭಿವೃದ್ಧಿಮಂಡಲಿ ಅಧ್ಯಕ್ಷರಿಗಾಗಲೀ ಗೊತ್ತಾಗುವುದಿಲ್ಲ. ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೂ ಗೊತ್ತಾಗುವುದಿಲ್ಲ. ಆದರೆ ಪಿ. ಡಬ್ಲ್ಯೂ. ಡಿ ಯಲ್ಲಿ ಅನೇಕ ಕಡೆ ಕೆಲಸ ಮಾಡದೇ ಇದ್ದರೂ ಸಹ ಕೆಲಸಮಾಡಿದೆ ಎಂದು ಸುಳ್ಳು ಲೆಕ್ಕ ತೋರಿಸಿ, ರೊಕ್ಕ ಪಡೆದಂಥ ಉದಾಹರಣೆಗಳು ಇವೆ. ಆದುದರಿಂದ ಅಸಿಸ್ಟೆಂಟ್ ಇಂಜಿನಿಯರ್ ಸಹ ಈ ಸಮನ್ವಯ ಸಮಿತಿಯಲ್ಲಿ ಇದ್ದರೆ ಯಾವ ಯಾವ ಕೆರೆಗಳ ರಿಪೇರಿ ಸಲುವಾಗಿ, ರಸ್ತೆಗಳ ರಿಪೇರಿ ಸಲುವಾಗಿ, ಕುಡಿಯಂಥ ನೀರಿನ ಭಾವಿ ತೋಡುವುದರ ಸಲುವಾಗಿ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಖರ್ಚಾಗಿದೆ, ಎಷ್ಟೆಷ್ಟು ಲ್ಯಾಪ್ಸ್ ಆಗಿವೆ, ನಿಮ್ಮ ಯೋಜನೆಗಳು ಏನು ಎನ್ನುವ ರಿಪೋರ್ಟ್‌ನ್ನು ಅಸಿಸ್ಟೆಂಟ್ ಇಂಜನಿಯರ್ ಈ ಸಮಿತಿ ಮುಂದೆ ಹೇಳಿದರೆ, ಅಸಿಸ್ಟೆಂಟ್ ಇಂಜನಿಯರ್ ಮಾಡತಕ

ಮುಖ್ಯ ಕಾರ್ಯಗಳು ಏನು ಎಂದು ಕಮಿಟಿಯಲ್ಲಿ ಹೇಳಲಿಕ್ಕೆ ಸಾಧ್ಯವಿದೆ. ಅಕಸ್ಮಾತ್ತಾಗಿ ಆಯಾಯಾ ತಾಲ್ಲೂಕಿನಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರ್, ಎಕ್ಸಿಕ್ಯೂಟೀವ್ ಇಂಜನಿಯರ್ ಹಣವನ್ನು ಕಡಿಮೆ ಕೊಟ್ಟರೂ ಎಂದರೆ, ಈ ತಾಲ್ಲೂಕಿಗೆ ಕಡಿಮೆ ಹಣ ಕೊಟ್ಟಿರುತ್ತಾರೆ, ನಮಗೆ ಸಾಕಾಗುವುದಿಲ್ಲ, ಹೆಚ್ಚಿಗೆ ಹಣ ಕೊಡಿ ಎಂದು ಶಿಫಾರಸು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಒಂದು ವೇಳೆ ಮೊತ್ತ ಪ್ರಮಾಣದ ಹಣ ಬಂದರೆ ಅಸಿಸ್ಟೆಂಟ್ ಇಂಜನಿಯರ್ ಸಮನ್ವಯ ಸಮಿತಿಯಲ್ಲಿದ್ದರೆ ಕಾರ್ಯಗಳ ವಿವರಣೆಯನ್ನು ಕೊಟ್ಟು ಎಷ್ಟು ಹಣ ಖರ್ಚಾಗಿದೆ, ಯಾವ ಯಾವ ಕೆಲಸಮಾಡಿದ್ದಾರೆ ಎಂದು ಹೇಳಲಿಕ್ಕೆ ಸಾಧ್ಯವಿದೆ ಅನೇಕ ಕಡೆ ಮೈನರ್ ಇರಿಗೇಷನ್ ಕೆರೆಗಳನ್ನು ರಿಪೇರಿ ಮಾಡದೇ ಖರ್ಚು ತೋರಿಸತಕ್ಕ ಉದಾಹರಣೆಗಳು ಇವೆ ಪಂಚಾಯಿತಿ ಅಧ್ಯಕ್ಷರು ಸಮನ್ವಯ ಸಮಿತಿಯಲ್ಲಿ ಇರುವುದರಿಂದ ಯಾವ ಯಾವ ಊರಿನಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಂಡಿದ್ದಾರೆ ಎಂದು ವಿವರವನ್ನು ಅಸಿಸ್ಟೆಂಟ್ ಇಂಜನಿಯರ್‌ಗೆ ಕೇಳಲಿಕ್ಕೆ ಅನುಕೂಲವಾಗುತ್ತದೆ ಆದುದರಿಂದ ಪ್ರತಿಯೊಂದು ತಾಲ್ಲೂಕಿನ ಅಸಿಸ್ಟೆಂಟ್ ಇಂಜಿನಿಯರ್ ಸಮನ್ವಯ ಸಮಿತಿಯಲ್ಲಿ ಇರಬೇಕು ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಆಮೇಲೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಅಸಿಸ್ಟೆಂಟ್ ಇಂಜಿನಿಯರ್ ಇರುತ್ತಾರೆ. ಈ ಅಸಿಸ್ಟೆಂಟ್ ಇಂಜನಿಯರ್ ಕೂಡ ಸಮನ್ವಯ ಸಮಿತಿಯಲ್ಲಿ ಇರಬೇಕು ಎಂದು ನನ್ನ ಅಭಿಪ್ರಾಯ. ನಮ್ಮ ರಾಜ್ಯ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರತಿಯೊಬ್ಬ ರೈತನಿಗೂ ಬಾವಿ ತೆಗೆದುಕೊಂಡು, ಪಂಪುಸೆಟ್ಟುಗಳನ್ನು ಹಾಕಿಕೊಂಡ ಒಕ್ಕಲತನವನ್ನು ಅಭಿವೃದ್ಧಿ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಹೊಂದಿದವರಿದ್ದಾರೆ. ಈ ದಿಶೆಯಲ್ಲಿ ಅನೇಕ ರೈತರೂ ಕೂಡ ವಿದ್ಯುತ್ತನ್ನು ಉಪಯೋಗಮಾಡುತ್ತಿದ್ದಾರೆ. ವಿದ್ಯುತ್ ಸವಲತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಪ್ರತಿಯೊಬ್ಬ ರೈತನಿಗೂ ಸಿಕ್ಕಲೇಬೇಕು. ಅನೇಕ ಗ್ರಾಮಗಳಲ್ಲಿ ಬೀದಿ ದೀಪಗಳನ್ನು ಹಾಕುವಂಥ ಕೆಲಸ ಅಲ್ಲಲ್ಲಿ ನಡೆದಿದೆ. ಈ ಅಸಿಸ್ಟೆಂಟ್ ಇಂಜನಿಯರ್ ಸಮನ್ವಯ ಸಮಿತಿಯಲ್ಲಿದ್ದರೆ ಎಲ್ಲಾ ಗ್ರಾಮದ ಗ್ರಾಮ ಪಂಚಾಯಿತಿ ಅಧ್ಯಕ್ಷರು ಬಂದಾಗ, ಎಲ್ಲೆಲ್ಲಿ ಯಾವ ನ್ಯೂನತೆಗಳು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್‌ನಿಂದ ಕಂಡುಬಂದಿದೆ, ಪ್ರತಿಯೊಂದು ಗ್ರಾಮದಲ್ಲೂ ಆಗಬೇಕಾದ ಕಾರ್ಯಗಳು ಏನು ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಿದೆ. ಇದರಿಂದ ಅಸಿಸ್ಟೆಂಟ್ ಇಂಜನಿಯರ್ ಆಗಿಂದಾಗ್ಗೆ ಗ್ರಾಮಗಳಿಗೆ ಭೇಟಿ ಕೊಟ್ಟು ಅನುಕೂಲಗಳನ್ನು ಒದಗಿಸಿಕೊಡಲಿಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಎಂ ಎಸ್.ಇ ಬಿ. ಅಸಿಸ್ಟೆಂಟ್ ಇಂಜನಿಯರ್ ಕೂಡ ಈ ಸಮಿತಿಯಲ್ಲಿ ಇರಬೇಕು ಎಂದು ಹೇಳುತ್ತೇನೆ.

ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಇರುತ್ತಾರೆ, ಇವರು ತಾಲ್ಲೂಕ್ ಹೆಡ್ ಆಗಿ ಇರುತ್ತಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಸುಮಾರು ೪೦೦, ೫೦೦ ಪ್ರಾಥಮಿಕ ಶಾಲಾ ಶಿಕ್ಷಕರು ಇರುತ್ತಾರೆ. ಕೆಲವು ವೇಳೆ ಪ್ರಾಥಮಿಕ ಶಾಲಾ ಶಿಕ್ಷಕರು ಕೆಲಸಮಾಡಲಿಲ್ಲ ಎಂದರೆ, ಅಥವಾ ಗ್ರಾಮಾಂತರ ಮಟ್ಟದಲ್ಲಿ ರಾಜಕೀಯದಲ್ಲಿ ಪ್ರವೇಶಿಸಿ ಕಲುಷಿತ ವಾತಾವರಣ ಉಂಟುಮಾಡುತ್ತಿದ್ದಾರೆ ಎಂದರೆ ಅಂಥ ಒಂದು ಪ್ರಸಂಗದಲ್ಲಿ ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಈ ಸಮನ್ವಯ ಸಮಿತಿಯಲ್ಲಿ ಇದ್ದರೆ ಗ್ರಾಮ ಪಂಚಾಯಿತಿ ಅಧ್ಯಕ್ಷರು, ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರು ಮತ್ತು ಶಾಸಕರನ್ನು ನೋಡಲಿಕ್ಕೆ ಬಂದಾಗ ಇಂತಿಂಥ ಶಿಕ್ಷಕರ ಮೇಲೆ ತಕರಾರು ಬಂದಿದೆ. ಏನು ಮಾಡಿದ್ದೀರಿ ಎಂದು ಕೇಳಲಿಕ್ಕೆ ಅವಕಾಶ ಇದೆ. ಆಗ ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಚಾರ್ಜಶೀಟ್ ಮಾಡಿ ಕ್ರಮ ತೆಗೆದುಕೊಳ್ಳಲಿಕ್ಕೆ ಅವಕಾಶವಾಗುತ್ತದೆ. ವರ್ಲ್ಡ್ ಫುಡ್ ಪ್ರೊಗ್ರಾಮಿನ ಪ್ರಕಾರ ನಮ್ಮ ಹಳ್ಳಿ ಭಾಷೆಯಲ್ಲಿ ಹೇಳುವುದಾದರೆ ಉಪ್ಪಿಟ್ಟಿನ ಯೋಜನೆಯಲ್ಲಿ ಅನೇಕ ತರಹದ ಸವಲತ್ತನ್ನು ಸರ್ಕಾರದವರು ಒದಗಿಸಿಕೊಟ್ಟಿದ್ದಾರೆ. ಈ ಸವಲತ್ತನ್ನು ಸರ್ಕಾರದವರು ಒದಗಿಸಿದ್ದರೂ ಕೂಡ ಅದು ಗ್ರಾಮದ ಜನರಿಗೆ ಮಕ್ಕಳಿಗೆ ಮುಟ್ಟುತ್ತಾ ಇಲ್ಲ. ಅನೇಕ ಕಡೆ ಅಸಿಸ್ಟೆಂಟ್ ಇಂಜನಿಯರಿಂದ ಲೆಕ್ಕ ತರಿಸಿ ನೋಡಿದರೆ ಇಷ್ಟಿಷ್ಟು ಟನ್ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ, ಹಳ್ಳಿಗಳಿಗೆ ವಿಸಿಟ್ ಕೊಟ್ಟಾಗ ನಿಮ್ಮ ಹಳ್ಳಿಗೆ ಎಷ್ಟು ಟನ್ ಉಪ್ಪಿಟ್ಟು ರವೆ ಕೊಟ್ಟಿದ್ದಾರೆ, ಎಷ್ಟು ಕೆ. ಜಿ. ಎಣ್ಣೆ ಕೊಟ್ಟಿದ್ದಾರೆ ಎಂದು ಕೇಳಿದರೆ ನಮಗೆ ಒಂದು ಕೆ. ಜಿ. ಹಿಟ್ಟು ಕೊಟ್ಟಿಲ್ಲ. ಬಂದು ಕೆ.ಜಿ. ಎಣ್ಣೆ ಕೂಡ ಬಂದಿಲ್ಲ ಎಂದು ಹೇಳುತ್ತಾರೆ, ಇಂತಹ ಉದಾಹರಣೆಗಳು ಬೇಕಾದಷ್ಟು ಕಂಡುಬರುತ್ತವೆ. ಶಿಕ್ಷಕರು ಮತ್ತು ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಮಿಲಾಯಿಸಿಯಾಗಿ ಈ ಪದಾರ್ಥಗಳನ್ನು ಲಪಟಾಯಿಸಿರುವಂಥ ಉದಾಹರಣೆಗಳು ನಮ್ಮ ರಾಜ್ಯದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಹೀಗೆ ಆಯಿತು ಎಂದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದಕ್ಕೆ ಅವಕಾಶವಾಗುತ್ತದೆ. ಇದನ್ನು ತಪ್ಪಿಸುವುದರ ಸಲುವಾಗಿ, ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಈ ಸಮಿತಿಯಲ್ಲಿ ಇದ್ದರು ಎಂದರೆ, ಸರ್ಕಾರದ ಯೋಜನೆಗಳು ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಸಕಾಲಕ್ಕೆ ಸಿಕ್ಕಿದೆಯೇ ಇಲ್ಲವೇ ಎಂದು ಕೇಳಲಿಕ್ಕೆ, ನೋಡಲಿಕ್ಕೆ, ಹೇಳಲಿಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನು ಹೇಳುತ್ತೇವೆ.

ಇನ್ನು ಅನೇಕ ಶಾಲೆಗಳಲ್ಲಿ ಬಡಮಕ್ಕಳಿಗೆ ರಾಜ್ಯಸರ್ಕಾರದವರು ಪುಸ್ತಕಗಳನ್ನು ಒದಗಿಸುತ್ತಿದ್ದಾರೆ. ಪ್ರತಿಯೊಂದು ಶಾಲೆಗೆ ಇಷ್ಟಿಷ್ಟು ಪುಸ್ತಕಗಳು ಎಂದು ಕಳಿಸುತ್ತಾರೆ. ಅಲ್ಲಿ ಹೋಗಿ ನೋಡಿದರೆ ಯಾವ ಶಾಲೆಗೂ ಪುಸ್ತಕಗಳು ಮುಟ್ಟಿರುವುದಿಲ್ಲ. ಲಾರಿಯಿಂದ ಬಂದ ಪುಸ್ತಕಗಳು ರೇಂಜ್ ಆಫೀಸ್ ಮೂಲೆಯೊಳಗೆ ಬಿದ್ದಿರತಕ್ಕ ಉದಾಹರಣೆಗಳಿವೆ. ಆದುದರಿಂದ ಈ ಅಧಿಕಾರಿ ಕೂತ ಸಮನ್ವಯ ಸಮಿತಿಯಲ್ಲಿದ್ದರೆ ತಾಲ್ಲೂಕಿಗೆ ಏನೇನು ಸಾಮಗ್ರಿಗಳು ಬಂದುವು, ಯಾವ ಯಾವ ಊರಿಗೆ ಎಷ್ಟೆಷ್ಟು ಕೊಟ್ಟರು ಎಂದು ಕೇಳುವುದಕ್ಕೆ ಅವಕಾಶವಾಗುತ್ತದೆ. ಗ್ರಾಮಪಂಚಾಯಿತಿ ಅಧ್ಯಕ್ಷರು ಈ ಸಮಿತಿಯಲ್ಲಿರುವುದರಿಂದ ಸಾಮಗ್ರಿಗಳು ಬಂದಿತ್ತು ಎಂದರೆ ಬಂತು ಎಂದು ಹೇಳುತ್ತಾರೆ, ಬಂದಿಲ್ಲ ಎಂದರೆ ಬಂದಿಲ್ಲ ಎಂದು ಹೇಳುತ್ತಾರೆ. ಆದುದರಿಂದ ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಹೆದರಿಕೊಂಡು ಕೆಲಸಮಾಡುತ್ತಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಸಮನ್ವಯ ಸಮಿತಿಯಲ್ಲಿರುವುದರಿಂದ ತಾಲ್ಲೂಕಿನ ಶಿಕ್ಷಣದ ವ್ಯವಸ್ಥೆ ಬಹಳ ಚೆನ್ನಾಗಿ ಆಗುತ್ತದೆ. ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಕಮಿಟಿಯಲ್ಲಿ ಇರುವುದು ಸೂಕ್ತವಾದುದು. ಆದುದರಿಂದ ಅವರೂ ಕೂಡ ಸಮಿತಿಯಲ್ಲಿ ಇರಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಮೇಲೆ ಸಹಾಯಕ ಪಶುವೈದ್ಯರು ಅವರೂ ಕೂಡ ಇಲ್ಲಿ ಇರಬೇಕು. ಇವತ್ತಿನ ದಿವಸ ಜನರಿಗೆ ನಾವು ಎಷ್ಟು ಮಹತ್ವ ಕೊಡುತ್ತೇವೆಯೋ ಅಷ್ಟೇ ಮಹತ್ವವನ್ನು ಜಾನುವಾರುಗಳಿಗೆ ಕೊಡಬೇಕಾಗಿದೆ. ನಮ್ಮ ರಾಜ್ಯ ಕೃಷಿ ಪ್ರಧಾನವಾಗಿರುವುದರಿಂದ ಜಾನುವಾರುಗಳ ಆರೋಗ್ಯ, ವಕ್ಕಲುತನದ ಅವಲಂಬನೆ ಇದೆ. ಆದುದರಿಂದ ಪಶುವೈದ್ಯಾಧಿಕಾರಿಗಳು ಅಲ್ಲಿ ಇದ್ದರೆ ಒಳ್ಳೆಯದು ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ಸ್, ವೆಟರಿನರಿ ಇನ್ಸ್‌ಪೆಕ್ಟರ್ಸ್ ಅವರು ಅನೇಕಕಡೆ ದನಗಳಿಗೆ ರೋಗ ಬಂದರೆ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇದ್ದರೆ ಇರುತ್ತಾರೆ ಇಲ್ಲದಿದ್ದರೆ ಇಲ್ಲ. ಒಬ್ಬ ಅಧಿಕಾರಿ ಅಲ್ಲಿ ಇದ್ದರೆ ಸಾಮಾನ್ಯ ಸಮಿತಿಗೆ ಬಂದಂತಹ ಪಂಚಾಯತಿ ಅಧ್ಯಕ್ಷರೇ ಆಗಲಿ, ಇನ್ನಿತರ ಅಧಿಕಾರಿಗಳೇ ಆಗಲಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೇ ಆಗಲಿ ಅವರಿಗೆ ಅಲ್ಲಿಯ ನ್ಯೂನತೆಗಳು ಕಂಡುಬಂದಲ್ಲಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್, ವೆಟರಿನರಿ ಇನ್ಸ್‌ಪೆಕ್ಟರ್ ಅವರ ಕಡೆಯಿಂದ ಕೆಲಸವನ್ನು ಯೋಗ್ಯರೀತಿಯಿಂದ ತಗೆದುಕೊಳ್ಳಿ ಎಂದು ಹೇಳುವುದಕ್ಕೆ ಬರುತ್ತದೆ. ಅಲ್ಲಿ ದನಗಳ ರೋಗಗಳಿಗೆ ಸಕಾಲದಲ್ಲಿ ಔಷಧಿಗಳ ಪೂರೈಕೆ ಆಗದ ಪಕ್ಷದಲ್ಲಿ ಸಕಾಲದಲ್ಲಿ ಔಷಧಿಯನ್ನು ಪೂರೈಸಿ ಎಂದು ಹೇಳುವುದಕ್ಕೆ ಬರುತ್ತದೆ. ಹಾಗೂ ಅವರು ಔಷಧಿಯನ್ನು ಪೂರೈಸದ ಇದ್ದ ಪಕ್ಷದಲ್ಲಿ ಮೇಲಧಿಕಾರಿಗಳು ಅಲ್ಲಿ ಅವನ್ನು ತರಿಸಿಕೊಡಲಿಕ್ಕೆ ಸಾಧ್ಯವಿದೆ ಎಂಬ ಮಾತನ್ನು ಹೇಳುತ್ತೇನೆ. ವೈದ್ಯಾಧಿಕಾರಿಗಳು ಅಲ್ಲಿ ಇದ್ದರೆ ಪಶುಸಂಪತ್ತನ್ನು ಅಭಿವೃದ್ಧಿಗೊಳಿಸಲಿಕ್ಕೆ, ಅವುಗಳನ್ನು ಸಂರಕ್ಷಿಸುವುದಕ್ಕೆ ಅನುಕೂಲವಾಗುತ್ತವೆ ಎನ್ನುವ ಉದ್ದೇಶದಿಂದ ಪಶುವೈದ್ಯ ಅಧಿಕಾರಿಗಳು ಅಲ್ಲಿ ಇರಬೇಕು ಎನ್ನುವುದೂ ನನ್ನ ವಾದವಾಗಿದೆ. ಅರಣ್ಯ ವಲಯಾಧಿಕಾರಿಗಳಿಗೆ ಲಕ್ಷಾಂತರ ರೂಪಾಯಿ ಹಣವನ್ನು ಅವರ ಕಡೆಗೆ ಕೊಟ್ಟು ಪ್ರತಿಯೊಂದು ತಾಲ್ಲೂಕಿನಲ್ಲಿ ಕೆಲಸ ಮಾಡಿಸಲಿಕ್ಕೆ ನಮ್ಮ ರಾಜ್ಯ ಸರ್ಕಾರದವರು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅರಣ್ಯ ವಲಯಾಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಾರೆಯೇ ಎಂಬುದನ್ನು ನೋಡಿದರೆ ಅವರು ಅನೇಕ ಕಡೆ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಸರ್ಕಾರದಿಂದ ಬಂದ ದುಡ್ಡಿನಲ್ಲಿ ಸಾವಿರ ಟ್ರೆಂಚ್ ಹೊಡೆಸಿದರೆ ೨ ಸಾವಿರ ಟ್ರೆಂಚ್ ಹೊಡೆಸಿದ್ದೇವೆಂದು ತೋರಿಸಿ ದುಡ್ಡು ವ್ಯತ್ಯಾಸವಾಗಿರುವ ಉದಾಹರಣೆ ಇದೆ. ಅನೇಕ ಕಡೆ ಗಿಡಗಳನ್ನು ಹಚ್ಚುತ್ತೇವೆಂದು ಸಾವಿರ ಗಿಡ ಹಚ್ಚಿದರೆ ೨ ಸಾವಿರ ಗಿಡಗಳನ್ನು ಹಚ್ಚಿದ್ದೇವೆಂದು ಹೇಳುವ ಉದಾಹರಣೆಗಳು ಇವೆ. ಕೆಲವು ಕಡೆ ೫೦೦ ಜನ ಕೂಲಿಗಳನ್ನು ಹಚ್ಚಿದ್ದರೆ, ಸಾವಿರ ಜನ ಕೂಲಿಗಳನ್ನು ಹಚ್ಚಿದ್ದೇವೆಂದು ಲೆಕ್ಕ ತೋರಿಸುವ ಉದಾಹರಣೆಗಳೂ ಇವೆ. ಗಿಡಗಳನ್ನು ಸಂರಕ್ಷಣೆ ಮಾಡುವ ಕಾರ್ಯ ಅದು ದೂರ ಹೋಯಿತು. ಹಿಂದೆ ಯೂರೋಪಿಯನ್ನರ ಕಾಲದಲ್ಲಿ ಕಾಡುರಿ ಒಡಿಸಲಿಕ್ಕೆ ರಸ್ತೆಯ ಎರಡೂ ಭಾಗಗಳಿಗೆ ನೆರಳಾಗಲಿ ಎಂದು ಏನು ಗಿಡಗಳನ್ನು ಹಾಕಿದ್ದರು ಆ ಗಿಡಗಳನ್ನು ಕಡಿದು ಮಾರಿಕೊಳ್ಳುವ ಉದಾಹರಣೆ ಇದೆ ಯಾರಾದರೂ ಗಿಡಗಳನ್ನು ಕಡಿದು ಮಾರಿಕೊಂಡರೆ, ಇದು ಅಧಿಕಾರಿಗಳ ಗಮನಕ್ಕೆ ಹೋದರೆ ಅವರು ಲಂಚ ತೆಗೆದುಕೊಂಡು ಬಿಟ್ಟುಬಿಡುತ್ತಾರೆ. ಈಗ ಗಿಡಗಳನ್ನು ಕಡಿದರೂ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವ ಅಧಿಕಾರಿಗಳು ಇದ್ದಾರೆ. ಈ ಸಾಮಾನ್ಯ ಸಮಿತಿಯಲ್ಲಿ ಅಧಿಕಾರಿಗಳು ಇದ್ದರೆ, ಚೇರ್‌ಮನ್‌ಗಳು ಇದ್ದರೆ, ಶಾಸಕರು ಇದ್ದರೆ ದೂರು ಬಂದಾಗ ಅವರುಗಳೆಲ್ಲಾ ಕಲೆತು ಮಾತುಕತೆಗಳನ್ನು ನಡೆಸಿ ವಿಚಾರ ವಿನಿಮಯ ಮಾಡಿ ಅರಣ್ಯವನ್ನು ಬೆಳೆಸುವುದಕ್ಕೆ ಮತ್ತು ಸರ್ಕಾರದಿಂದ ಎಷ್ಟು ಹಣ ಬರುತ್ತದೆ ಆ ಹಣವನ್ನು ಸದ್ವಿನಿಯೋಗಮಾಡಿ ಗ್ರಾಮ ಪಂಚಾಯತಿ ಹೆಸರಿನಲ್ಲಿ ಫಾರೆಸ್ಟ್ ಮಾಡಬೇಕು ಆ ಬಗ್ಗೆ ಯೋಜನೆಗಳನ್ನು ಕೈಕೊಳ್ಳಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ಸಾಧ್ಯವಿದೆ. ಆ ರೀತಿ ನಡೆಯಲು ಸಾಧ್ಯವಿದೆ. ಆದುದರಿಂದ ಸರ್ಕಾರದ ಹಣ ದುರ್ವಿನಿಯೋಗವಾಗದ ರೀತಿಯಲ್ಲಿ ನೋಡುವುದಕ್ಕೆ ಸಾಧ್ಯವಿರುವುದರಿಂದ ಸಾಮಾನ್ಯ ಸಮಿತಿಯಲ್ಲಿ ಅಧಿಕಾರಿಗಳು ಇರಬೇಕೆಂದು ನನ್ನ ವಾದ. ಅದರನಂತರ ಕ್ಷೇತ್ರಶಿಕ್ಷಣಾಧಿಕಾರಿಗಳು ತಾಲ್ಲೂಕು ಪಂ. ಡಿ. ಇ. ಗಳು ಈ ಸಮಿತಿಯಲ್ಲಿ

ಇರಬೇಕು. ಬಿ ಡಿ ಒ. ಗಳು ಅಲ್ಲಿ ಇರಬೇಕು ಏಕೆಂದರೆ ಅವರು ತಾಲ್ಲೂಕಿನ ಮುಖ್ಯಾಧಿಕಾರಿಗಳು ಇದ್ದ ಹಾಗೆ. ಅನೇಕ ಕಡೆ ಲಂಗು ಇಲ್ಲ, ಲಗಾಮೂ ಇಲ್ಲ ಹಾಗಾಗಿದೆ ತಾಲ್ಲೂಕು ಬೋರ್ಡ್ ಫಂಡ್ಸ್‌ನ್ನು ಅನೇಕ ಶಾಸಕರು ಕೇಳಿದರೆ ಳಿ ಐ. ಎನ್. ಇ. ಡಿ. ಎಂದು ಲಕ್ಷಾಂತರ ರೂಪಾಯಿ ಹಣ ಬರುತ್ತದೆ, ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಕೊಡುವುದಿಲ್ಲ. ಸರ್ಕಾರದಿಂದ ನೇರವಾಗಿ ಹಣ ಬಂದಿದೆ. ಶಾಸಕರ ಅಭಿಪ್ರಾಯ ಇಲ್ಲದೆ ತಾಲ್ಲೂಕಿನ ಬೋರ್ಡ್ ಅಭಿಪ್ರಾಯ ಇಲ್ಲದೆ, ಮೆಂಬರ್‌ಗಳ ಅಭಿಪ್ರಾಯ ಇಲ್ಲದೆ ಕೆಲಸಮಾಡಿದಂಥ ಅನೇಕ ಉದಾಹರಣೆಗಳೂ ಇವೆ. ಗ್ರಾಮದಲ್ಲಿ ಶಾಲೆಗಳನ್ನು ಕಟ್ಟಿಸದೇ ಇದ್ದರೂ, ರಸ್ತೆಗಳನ್ನು ಮಾಡದೇ ಇದ್ದರೂ ಕೆರೆ ರಿಪೇರಿ ಮಾಡದೇ ಇದ್ದರೂ ಹಣವನ್ನು ಖರ್ಚುಮಾಡಿದ ಉದಾಹರಣೆಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಇವೆ ಆದುದರಿಂದ ಬಿ.ಡಿ.ಒ. ಗಳು ಅಲ್ಲಿ ಇದ್ದರೆ ಆ ಸಮಿತಿಯಲ್ಲಿ ವಿಚಾರ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳುತ್ತೇನೆ. ಇದೇ ಪ್ರಕಾರ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಧ್ಯಕ್ಷರು ಏತಕ್ಕೆ ಇರಬೇಕು ಎಂದರೆ ಆಕಸ್ಮಾತ್ತಾಗಿ ಆ ಕಡೆಯವರು ಅಧ್ಯಕ್ಷರು ಆಗಿದ್ದಾರೆ ನಮ್ಮ ಕಡೆಯ ಶಾಸಕರು ಇದ್ದು, ಆಡಳಿತ ಕಾಂಗ್ರೆಸ್ ಪ್ರೆಸಿಡೆಂಟ್ ಇದ್ದು, ಪೊಲಿಟಿಕಲ್ ಪಾರ್ಟಿಯ ಅಧ್ಯಕ್ಷರೂ ಇದರೆ ನಮ್ಮಲ್ಲಿರುವ ಲೋಪದೋಷಗಳನ್ನು ಅವರು ಎತ್ತಿ ಹೇಳಲಿಕ್ಕೆ ಸಾಧ್ಯ ಇರುತ್ತದೆ. ಆದುದರಿಂದ ಅವರೂ ಇರಬೇಕೆಂದು ನನ್ನ ವಾದ. ವೈದ್ಯಾಧಿಕಾರಿಗಳು ಇಲ್ಲಿ ಇದ್ದರೆ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ನಲ್ಲಿ ಇರುವವರು ತಾಲ್ಲೂಕಿಂ ಆಸ್ಪತ್ರೆಗಳಿಗೆ ಔಷಧಿಗಳು ಸರಿಯಾಗಿ ಸಿಕ್ಕುತ್ತದೆಯೇ ಇಲ್ಲವೇ ಜನರ ಅನುಕೂಲಕ್ಕಾಗಿ ಡಾಕ್ಟರುಗಳು ಕೆಲಸಮಾಡುತ್ತಾರೆಯೇ ಔಷಧಿಗಳನ್ನು ಮಾರುತ್ತಾರೆಯೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯ ಇದೆ. ಆದುದರಿಂದ ತಾಲ್ಲೂಕು ಮಟ್ಟದ ಅಧಿಕಾರಿಗಳು ೧೫ ಅಲ್ಲದಿದ್ದರೆ ಇನ್ನೂ ಹೆಚ್ಚು ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ. ಅಲ್ಲಿ ಸಮಿತಿಯಲ್ಲಿ ಸ್ಥಳೀಯ ಪತ್ರಿಕಾಕರ್ತರು ಇರಬೇಕೆಂದು ಹೇಳುತ್ತೇನೆ. ನಮ್ಮ ಸರ್ಕಾರದ ಯೋಜನೆಗಳನ್ನು ಎಲ್ಲಾ ಕಡೆಗೆ, ಇಲ್ಲಿ ಆದಂತ ಅಭಿವೃದ್ಧಿ ಕಾರ್ಯಗಳನ್ನು, ನಡೆದಂತ ಚಟುವಟಿಕೆಗಳನ್ನು ನಮಗೆ ವರದಿ ಮಾಡಲಿಕ್ಕೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಪತ್ರಿಕೆಯ ರೆಪ್ರಸೆಂಟೇಟಿವ್‌ಗಳು ಇದ್ದರೆ ಹೆಚ್ಚು ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ತಾಲ್ಲೂಕು ಮಟ್ಟದಲ್ಲಿ ಗ್ರಾಮಸೇವಕರೇ ಆಗಲಿ, ಸೆಕ್ರೆಟರಿಗಳಾಗಲೀ, ವಿಲೇಜ್ ಅಕೌಂಟೆಂಟ ಗಳೇ ಆಗಲೀ ಸರಕಲ್ ಮಟ್ಟದ ಅಧಿಕಾರಿಗಳೇ ಆಗಲಿ ಹಿಡಿತದಲ್ಲಿ ಇರುತ್ತಾರೆ. ಇದರಿಂದ ತಾಲ್ಲೂಕು ಮಟ್ಟದಲ್ಲಿ ಚೆನ್ನಾಗಿ ಕೆಲಸ ಮಾಡಲಿಕ್ಕೆ ಯೋಗ್ಯವಾಗಿರುತ್ತದೆ ಎಂಬ ಸೂಚನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ನೆಚ್ಚಿನ ಮಂತ್ರಿಗಳು, ನನ್ನ ಸ್ನೇಹಿತರೂ ಇದಕ್ಕೆ ಒಪ್ಪಿಗೆ ಕೊಡುತ್ತಾರೆಂದು ಭಾವಿಸಿ ನನ್ನ ನಾಲ್ಕು ಮಾತುಗಳನ್ನೂ ಮುಗಿಸುತ್ತೇನೆ.

†ಶ್ರೀ ಎ. ನಂಜಪ್ಪ (ಅರಸೀಕರೆ).—ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರಾದಂತ ಶ್ರೀಮಾನ್ ಬಿ. ಜಿ. ಣಗಿಕಾರ್ ಅವರು ತಂದಿರತಕ್ಕ ನಿರ್ಣಯವನ್ನು ತತ್ವದೃಷ್ಟಿಯಿಂದ ನಾನು ಅನುಮೋದಿಸುತ್ತೇನೆ. ಈ ಒಂದು ತಾಲ್ಲೂಕಿನ ಸಮಗ್ರವಾದಂಥ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದು ಮತ್ತು ಹೊಸದಾಗಿ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳತಕ್ಕ ಬಗ್ಗೆ ಆಗಿಂದಾಗ್ಗೆ ಆ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳಲ್ಲಿ ಕೆಲಸಮಾಡತಕ್ಕಂಥ ಮುಖಂಡರುಗಳು ಒಂದು ಕಡೆ ಸೇರಿ ಸಮಾಲೋಚನೆ ಮಾಡಿ ವಿಚಾರವಿನಿಯಮಮಾಡಿ ಒಂದು ತೀರ್ಮಾನಕ್ಕೆ ಬರತಕ್ಕ ಒಂದು ದೃಷ್ಟಿ ಏನು ಇದೆ ಅದು ಬಹಳ ಒಳ್ಳೆಯ ಅಂಶದಿಂದ ಕೂಡಿರುತ್ತದೆ. ಈ ದೃಷ್ಟಿಯಿಂದ ನಾನೂ ಈ ಒಂದು ನಿರ್ಣಯವನ್ನು ಅನುಮೋದಿಸುತ್ತಾ ಎರಡೆರಡು ವಿಷಯಗಳ ಬಗ್ಗೆ ನನಗೆ ಕ್ಲಾರಿಫಿಕೇಷನ್ ಬೇಕಾಗಿದೆ. ತಾಲ್ಲೂಕಿನ ಕೇಂದ್ರ ಸಹಕಾರ ಬ್ಯಾಂಕಿನ ಅಧಿಕಾರಿಗಳು ಈ ಸಮಿತಿಯ ಸದಸ್ಯರಾಗಿರಬೇಕೆಂದು ಇದೆ ಪ್ರತಿ ಕೇಂದ್ರ ಸಹಕಾರ ಬ್ಯಾಂಕಿನ ಶಾಖೆಗಳಲ್ಲಿ ಖಾಸಗಿಯವರು ಚೇರ್ಮನ್ ಆಗಿರುತ್ತಾರೆ. ಈ ಚೇರ್ಮನ್‌ರವರು ಸಮಿತಿಯ ಸದಸ್ಯರಾಗಿರುವುದು ಸೂಕ್ತ. ಅವರಿಗೆ ಈ ಯೋಜನೆ ಬಗ್ಗೆ ಎಲ್ಲಾ ಮೊಹಿತಿ ಇರುತ್ತದೆ ಎಂಬ ದೃಷ್ಟಿಯಿಂದ ಅವರನ್ನು ಸೇರಿಸಿಕೊಳ್ಳುವುದಕ್ಕೆ ಒಪ್ಪಿಕೊಳ್ಳಬೇಕು. ಅನಂತರ ತಾಲ್ಲೂಕಿನ ಗ್ರಾಮಪಂಚಾಯತಿಯ ಅಧ್ಯಕ್ಷರು ಎಂದು ತಿಳಿಸಿದ್ದಾರೆ. ಮಾನ್ಯ ಅಧ್ಯಕ್ಷರೇ ಒಂದು ತಾಲ್ಲೂಕಿನಲ್ಲಿ ಸುಮಾರು ೪೦–೫೦ ಪಂಚಾಯಿತಿಗಳು ಇರುತ್ತವೆ. ೪೦–೫೦ ಪಂಚಾಯಿತಿಗಳ ಅಧ್ಯಕ್ಷರುಗಳನ್ನೂ ಈ ಸಮಿತಿಗೆ ಸದಸ್ಯರನ್ನಾಗಿ ಮಾಡಿಕೊಂಡರೆ ಸಮಿತಿ ಅಂತ ಆಗುವುದಿಲ್ಲ. ಸಭೆ ಅಂತ ಆಗುವುದಿಲ್ಲ. ಅದು ಒಂದು ದೊಡ್ಡ ಸಮ್ಮೇಳನವಾಗುತ್ತದೆ. ಅವರು ಹೇಳಿರುವ ಹಾಗೆ ೬೦–೭೦ ಜನ ಅಧಿಕಾರಿಗಳು ಸೇರಿಕೊಂಡರೆ ೧೦೦ ಜನ ಆಗುತ್ತದೆ. ಒಂದು ಸಮ್ಮೇಳನ ಸೇರಿಕೊಂಡರೆ ಯಾವ ತೀರ್ಮಾನವನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬರೀ ಭಾಷಣಗಳಲ್ಲಿಯೇ ಪರ್ಯಾವಸನ ಆಗುತ್ತದೆ. ರಚನಾತ್ಮಕವಾದ ಕೆಲಸ ಆಗುವುದಿಲ್ಲ. ತಾಲ್ಲೂಕು ಮತ್ತು ಪಂಚಾಯಿತಿಗಳಿಗೆ ಸಂಬಂಧಪಟ್ಟ ಹಾಗೆ, ಬಾಕ್ಕ್ ಅಧಿಕಾರಿಗಳು ಅಲ್ಲಿ ಇರುತ್ತಾರೆ. ಪಂಚಾಯತಿ ಅಧ್ಯಕ್ಷರುಗಳನ್ನೂ ಈ ಸಮಿತಿಗೆ ತೆಗೆದುಕೊಳ್ಳುವುದು

ಅನಾವಶ್ಯಕ ಎಂದು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಹಾಗೆ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಧ್ಯಕ್ಷರುಗಳು ಇದೆ. ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ ರಚನಾತ್ಮಕ ಕೆಲಸಗಳನ್ನು ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸೇರತಕ್ಕ ಸಭೆಗಳಲ್ಲಿ ರಾಜಕೀಯ ಬಂದರೆ, ಅಭಿವೃದ್ಧಿ ಕೆಲಸಕಾರ್ಯಗಳು ನಿಂತಹೋಗುತ್ತವೆ ಅವರವರ ಪಾರ್ಟಿ, ಅವರವರ ಪಕ್ಷದ ವಿಚಾರ ಗಳನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ ಹೆಚ್ಚಿಗೆ ಗಮನ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ರಾಜಕೀಯ ಹೆಚ್ಚಿಗೆ ಪ್ರಸ್ತಾಪ ಆಗುವ ಮುಖಾಂತರ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುವುತ್ತದೆ. ಆ ಒಂದು ದೃಷ್ಟಿಯಿಂದ ಸಂಪೂರ್ಣವಾಗಿ ಇದನ್ನು ಕೈಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ೫ ವರ್ಷದ ಹಿಂದೆ ವರ್ಷಕ್ಕೆ ಒಂದು ಸಾರಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅಭಿವೃದ್ಧಿ ಸಮ್ಮೇಳನದ ಹೆಸರಿನಲ್ಲಿ ಸರ್ಕಾರದವರು ಸಮ್ಮೇಳನ ಏರ್ಪಾಡು ಮಾಡುವ ಮುಖೇನ ಆಯಾಯಾ ವರ್ಷದಲ್ಲಿ, ಆಯಾ ತಾಲ್ಲೂಕಿನಲ್ಲಿ ಏನೇನು ಕೆಲಸಕಾರ್ಯಗಳು ಸಾಧನೆ ಆದವು. ಸಾಧನೆ ಮಾಡುವ ಕೆಲಸ ಕಾರ್ಯಗಳು ಯಾವುದು, ಏನು ಎಡರು ತೊಡರುಗಳು ಬಂದು ನಿಂತು ಹೋದವು ಮುಂದೆ ಏನು ಅಭಿವೃದ್ಧಿ ಕಾರ್ಯಗಳು ಮಾಡಬೇಕು ಎನ್ನುವ ಬಗ್ಗೆ ವಿಚಾರವಿನಿಮಯ ಮಾಡಬೇಕು ಎಂದೂ, ಅಭಿವೃದ್ಧಿಕಾರ್ಯಗಳನ್ನು ಪರಿಶೀಲನೆ ಮಾಡುವುದಕ್ಕೋಸ್ಕರ ಇಂಥ ಸಮ್ಮೇಳನ ಪ್ರತಿಯೊಂದು ತಾಲ್ಲೂಕಿನ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ನಡೆದುಕೊಂಡು ಬರುತ್ತಿತ್ತು. ಕಾರಣಾಂತರದಿಂದ ಅಂಥ ಸಮ್ಮೇಳನ ನಡೆಯುತ್ತಾ ಇಲ್ಲ ಸಮ್ಮೇಳನದಲ್ಲಿ ಆಗತಕ್ಕ ವಿಷಯಗಳು ಬೆಳಿಗ್ಗೆ ೧೦ ಗಂಟೆಗೆ ಪ್ರಾರಂಭವಾಗಿ ೫ ಗಂಟೆಗೆ ಮುಗಿಯುತ್ತದೆ. ೨೦೦ ಪ್ರತಿನಿಧಿಗಳು ಎಲ್ಲರೂ ಮಾತನಾಡಬೇಕೆಂಬ ಅಭಿಲಾಷೆ ಇಟ್ಟುಕೊಂಡು ಬಾಷಣ ಗಳ ಸುರಿಮಳೆ ಆಗುತ್ತದೆಯೇ ಹೊರತು, ರಚನಾತ್ಮಕವಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಸಮಿತಿಯನ್ನು ಗ್ರಾಮಪಂಚಾಯಿತಿಯ ಅಧ್ಯಕ್ಷರು. ರಾಜಕೀಯ ಪಕ್ಷಗಳನ್ನು ಬಿಟ್ಟು ಸಮಿತಿಯನ್ನು ರಚನೆಮಾಡಿ, ಕೊನೆಪಕ್ಷ ಮೂರು ತಿಂಗಳಿಗೆ ಒಂದು ಸಾರಿ ಒಂದು ಕಡೆ ಸೇರಿ ವಿಮರ್ಶೆ ಮಾಡುವುದು ತೀರ್ಮಾನ ಮಾಡುವುದು ಬಹಳ ಸೂಕ್ತ, ಆ ಒಂದು ದೃಷ್ಟಿಯಿಂದ ನಾನು ಇದನ್ನು ಅನುಮೋದಿಸುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಸಭಾಧ್ಯಕ್ಷರೇ, ನಮ್ಮ ಸ್ನೇಹಿತರಾದ ಬಣಕಾರ್‌ರವರು ತಾಲ್ಲೂಕಿನ ಸಮನ್ವಯ ಸಮಿತಿಯ ಬಗ್ಗೆ ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಈ ಒಂದು ನಿರ್ಣಯವನ್ನು ನೋಡಿ ನನಗೆ ಪ್ರಥಮ ಬಂದಿರತಕ್ಕ ಚಿತ್ರ ಏನು ಎಂದರೆ, ಒಳ್ಳೆಯ ಕಾಲದಲ್ಲಿ ನಾವು ಶಾಸಕರಾಗಿ ಬಂದೆವು, ಇಂಥ ಒಂದು ನಿರ್ಣಯ ಬಂದಿದ್ದು ಸಂತೋಷವಾಯಿತು. ಒಂದು ಪಾಳೇಗಾರಿಕೆ ಪಟ್ಟು ನಿರ್ಮಾಣಮಾಡಿದ ಹಾಗೆ ಆಯಿತು. ಪ್ರತಿಯೊಂದು ತಾಲ್ಲೂಕಿನ, ಪ್ರತಿಯೊಂದು ಕ್ಷೇತ್ರದ ಪಾಳೇಪಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಇರತಕ್ಕ ಸಮಿತಿ ಎಂದರೆ ನಿಜವಾಗಿಯೂ ಮನಸ್ಸಿಗೆ ಸಂತೋಷ ಕೊಡತಕ್ಕ ವಿಚಾರ. ಸರ್ಕಾರದವರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ, ಒಪ್ಪಿದರೆ ಬಹಳ ಒಳ್ಳೆಯದು. ಆದರೆ ಎಲ್ಲಾ ಶಾಸಕರಿಗೆ ಒಂದು ಸಣ್ಣ ರಾಜ್ಯ ನಿರ್ಮಾಣ ಮಾಡಿದಂತೆ ಆಯಿತು. ಇಂಥ ರಾಜ್ಯದ ನಿರ್ಮಾಣದ ಅವಶ್ಯಕತೆ ಬಹಳ ಇದೆ. ಜನತೆಯ ಪ್ರತಿನಿಧಿಗಳು, ಜನತೆಯ ಮತವನ್ನು ಪಡೆದು ಬಂದಮೇಲೆ ಜವಾಬ್ದಾರಿ ಇರುತ್ತದೆ. ಆಗು ಹೋಗುಗಳನ್ನು ಕೇಳತಕ್ಕದ್ದು ಶಾಸಕರನ್ನು ಕೇಳುತ್ತಾರೆ, ಅಧಿಕಾರಿಗಳನ್ನು ಕೇಳುವುದಿಲ್ಲ ಅಧಿಕಾರಿಗಳು ಮಾಡಿದಂಥ ತಪ್ಪು ಇದ್ದರೆ ಅದನ್ನು ಶಾಸಕರ ಮೇಲೆ ಹೊರಿಸುವುದು ಸ್ವಾಭಾವಿಕ, ಆ ದೃಷ್ಟಿಯಿಂದ ಸಮಿತಿಯ ಅವಶ್ಯಕತೆ ಬಹಳ ಇದೆ. ಒಂದು ವಿಪರ್ಯಾಸ ಎಂದರೆ ಒಂದು ತಾಲ್ಲೂಕಿನಲ್ಲಿ ಇಬ್ಬರು ಶಾಸಕರು ಇದ್ದರೆ, ಪೈಪೋಟಿ ಬರುತ್ತದೆ. ಅಧ್ಯಕ್ಷರು ಯಾರು ಆಗಬೇಕು ಹೆಡ್ ಆಂಡ್ ಟೈಲ್ ಹೋಗಬೇಕೋ ಇನ್ನೂ ಯಾರು ಅಧ್ಯಕ್ಷರು ಆಗಬೇಕೋ, ಯಾರು ಆಗಬಾರದು. ಹೆಡ್ ಆಂಡ್ ಟೈಲ್‌ಗೆ ಹೋಗಿ ನಿರ್ಣಯ ಮಾಡಬೇಕಾಗುತ್ತದೆ ಒಂದು ತಾಲ್ಲೂಕಿನಲ್ಲಿ ಒಬ್ಬರು ಶಾಸಕರು ಇದ್ದರೆ ತೊಂದರೆ ಇಲ್ಲ ಮಲೆನಾಡಿನಲ್ಲಿ ಇಂಥ ತೊಂದರೆಗಳು ಬರುವುದಿಲ್ಲ. ೪–೫ ತಾಲ್ಲೂಕಿಗೆ ಒಬ್ಬರು ಶಾಸಕರು ಇದ್ದಾರೆ. ಬಯಲು ಸೀಮೆಯಲ್ಲಿ ಒಂದೊಂದು ತಾಲ್ಲೂಕಿಗೆ ಇಬ್ಬರು ಇರುವುದು ಇಂಥ ಸಂದರ್ಭ ಇರುತ್ತದೆ. ಅಂಥ ಸಂದರ್ಭದಲ್ಲಿ ಯಾರು ಅಧ್ಯಕ್ಷರು ಎಂದು ಮುಖ್ಯಮಂತ್ರಿಗಳವರೆಗೆ ಬರುತ್ತದೆ. ಪೈಪೋಟಿಗಳು ಆಗತಕ್ಕ ಸಂದರ್ಭಗಳು ಇರುತ್ತವೆ ಒಳ್ಳೆಯ ಮನಸ್ಸು ಮಾಡಿ ಮಂತ್ರಿಗಳು ಇದನ್ನು ಒಪ್ಪಬೇಕು ಎಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ನಾನಾದರೂ ತಿಳಿದುಕೊಂಡಿದ್ದೇನೆ. ಬ್ರಿಟಿಷ್ ಸಿಸ್ಟಮ್ ಪಾರ್ಲಿಮೆಂಟರಿ ಡೆಮಾಕ್ರಸಿಯನ್ನು ಒಪ್ಪಿಕೊಂಡು ಬಂದಿರತಕ್ಕ ರಾಜ್ಯಾಂಗ ಪದ್ಧತಿಯ ವಿಧಿ ವಿಪರ್ಯಾಸ ನಡೆವಳಿಕೆಯೊಳಗೆ, ವ್ಯತಿರಿಕ್ತವಾದ ನಡೆವಳಿಕೆ ಯಾಗುತ್ತದೆ. ಇವತ್ತು ಬ್ರಿಟಿಷ್ ಸಿಸ್ಟಮ್ ಪಾರ್ಲಿಮೆಂಟರಿ ಡೆಮಾಕ್ರಸಿ ಒಪ್ಪಿಕೊಂಡಿದ್ದೇವೆ. ಬ್ರಿಟಿಷ್ ಸಿಸ್ಟಮ್ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಶಾಸಕಾಂಗ ಎನ್ನುವುದು ಅಗ್ರಸ್ಥಾನದಲ್ಲಿರುವ ಸ್ಥಾನ. ಶಾಸಕಾಂಗದ ನಂತರ ನ್ಯಾಯಾಂಗ ಬರುತ್ತದೆ. ನ್ಯಾಯಾಂಗದ ನಂತರ ಕಾರ್ಯಾಂಗ ಬರುತ್ತದೆ. ದಿನೇ

ದಿನೇ ಕಾಣುತ್ತಾ ಇರುವುದು ಏನು ಕಾರ್ಯಾಂಗದ ಮೇಲಂಗೈ. ಕಾರ್ಯಾಂಗದ ಅಡಿಯಾಳು ಶಾಸಕಾಂಗ ಇರುವ ಪರಿಸ್ಥಿತಿ ಪ್ರತಿದಿನ ಕಾಣುತ್ತಿದೆ. ತಪ್ಪೋ, ನೆಪ್ಪೋ ತಾವೇ ಹೇಳಬೇಕು. ನಾವು ಯಾವ ಒಂದು ವಿಧಿನಿಯಮ ಹಾಕಿಕೊಂಡಿರುತ್ತೇವೆ. ಯಾವ ಪದ್ಧತಿಯನ್ನು ಚಾಚೂ ತಪ್ಪದೇ ಅನುಸರಿಸಿಕೊಂಡು ಬರುತ್ತೇವೆ, ಆ ಪದ್ಧತಿಯನ್ನು ಅನುಸರಿಸಿಕೊಂಡು ಬರುವಾಗ ಅದರಲ್ಲಿ ಸ್ವಲ್ಪ ಕೂಡ ನ್ಯೂನತೆ ಇರಬಾರದು ಇದು ನನ್ನ ಕೋರಿಕೆ. ಇವತ್ತು ತಾವೇ ಯೋಚನೆಮಾಡಿ, ಪ್ರತಿಯೊಂದು ತಾಲ್ಲೂಕಿನಲ್ಲಿ ಸಮಿತಿಗಳನ್ನು ನೇಮಕಮಾಡುತ್ತೇವೆ. ಪ್ರತಿಯೊಂದು ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ಮಾಡುತ್ತೇವೆ ಮಂತ್ರಿಗಳು ಆಗಿರತಕ್ಕವರು ತಮ್ಮ ಕೈಕೆಳಗೆ ಇರತಕ್ಕ ಸಾಮಾನ್ಯ ನೌಕರರು ಸಮಿತಿಯ ಅಧ್ಯಕ್ಷರು ಶಾಸಕರು ಸಮಿತಿಯ ಸದಸ್ಯರನಾಗಿ ಮಾಡುತ್ತೇವೆ. ಇದು ಎಂಥ ವಿಧಿವಿಪರ್ಯಾಸ ಎಂದು ಕೇಳುತ್ತೇನೆ. ನಾವು ಯಾವತ್ತೂ ಪ್ರಜಾಪ್ರಭುತ್ವವನ್ನೂ ಗೌರವಿಸುತ್ತೇವೆ. ಮಾನ್ಯತೆ ಕೊಡುವ ಪದ್ಧತಿ ಒಪ್ಪಿಕೊಳ್ಳುತ್ತೇವೆ. ಒಪ್ಪಿಕೊಳ್ಳುವಾಗ ನೌಕರಶಾಹಿಯನ್ನು ಒಬ್ಬ ಶಾಸಕನ ತಲೆಯ ಮೇಲೆಕೂರಿಸತಕ್ಕದ್ದು ಯಾವ ಲಕ್ಷಣ? ಇದು ಸರಿಯಾದುದೇ ತಾವು ಯೋಚನೆ ಮಾಡಬೇಕು. ತಮ್ಮ ವಾದ ನನಗೆ ಅರ್ಥವಾಗುತ್ತದೆ. ಸರ್ಕಾರದ ನೇರವಾದ ಕಂಟ್ರೋಲ್ ಇರುವುದಿಲ್ಲ, ಒಬ್ಬ ಶಾಸಕನನ್ನು ಅಧ್ಯಕ್ಷನನ್ನಾಗಿ ಮಾಡಿಬಿಟ್ಟರೆ, ಸಮಿತಿಗಳಲ್ಲಿ ಶಾಸಕ ಆಗಿರತಕ್ಕವನು ಸರ್ಕಾರಕ್ಕೆ ಸಪೋರ್ಟ್ ಮಾಡತಕ್ಕಂಥ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸತಕ್ಕ ಶಾಸಕ ಇರಬೇಕು. ಇನ್ನೊಂದು ಕ್ಷೇತ್ರದಲ್ಲಿ ಸರ್ಕಾರವನ್ನು ಕಟುವಾಗಿ ಟೀಕೆ ಮಾಡುವಂತ, ಕಟುವಾಗಿ ವಿರೋಧಿಸುವ ಶಾಸಕ ಇರಬೇಕು. ಅಂಥ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದಾಗ ಸರ್ಕಾರಕ್ಕೆ ನೇರವಾಗಿ ಹತೋಟಿ ಇರುವುದಿಲ್ಲ, ಆ ದೃಷ್ಟಿಯಿಂದ ಅಧಿಕಾರಿಗಳನ್ನು ಪ್ರತಿಯೊಂದು ಸಮಿತಿಯಲ್ಲಿ ಹಾಕಬೇಕು. ಆ ಮೂಲಕ ಸರ್ಕಾರ ಆ ಒಂದು ಸಮಿತಿಗಳನ್ನು ಒಂದು ಕಂಟ್ರೋಲ್‌ನಲ್ಲಿ ಒಂದು ನಿರ್ಬಂಧದಲ್ಲಿ ಇಟ್ಟುಕೊಳ್ಳುವುದಕ್ಕೆ ಆಗುತ್ತದೆ ಎನ್ನುವ ವಾದ ತಮ್ಮದು ಇದೆ. ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಒಬ್ಬ ಶಾಸಕನನ್ನು ಅಧ್ಯಕ್ಷನನ್ನಾಗಿ ಯಾವುದೇ ಸಮಿತಿಯಲ್ಲಿ ಹಾಕಿದಾಗ ಸರ್ವತಂತ್ರ ಸ್ವತಂತ್ರನಾಗಿ ನಡೆದುಕೊಳ್ಳುವುದಕ್ಕೆ ಅವಕಾಶ ಬರುತ್ತದೆ ಅವನ ಮೇಲೆ ಕಾರ್ಯಾಂಗದ ನಿಯಂತ್ರಣ ಏನು ಇದೆ. ಆ ನಿಯಂತ್ರಣ ಹಾಕತಕ್ಕ ವಾದ ನಿಮಗೆ ಆಗುವುದಿಲ್ಲ. ಆಗ ಪೇಚಿಗೆ ಸಿಕ್ಕುತ್ತಾರೆ. ನಾವು ಏನು ಮಾಡುತ್ತೇವೆ ತಹಶೀಲ್ದಾರರನ್ನು ಮತ್ತು ಅಸಿಸ್ಟೆಂಟ್ ಕಮಿಷನರ್‌ರವರನ್ನು ಅಧ್ಯಕ್ಷರನಾಗಿ ಹಾಕುತ್ತೇವೆ. ಅದನ್ನು ನಾನು ಒಪ್ಪುತ್ತೇನೆ, ಆದರೆ ತಾವು ಯೋಚನೆ ಮಾಡಬೇಕಾಗುತ್ತದೆ ಶಾಸಕಾಂಗವನ್ನು ನಾವು ಕಾರ್ಯಾಂಗಕ್ಕೆ ಮೇಲೆ ಎಂದು ಪರಿಗಣಿಸಿದಾಗ ಬ್ರಿಟಿಷ್ ಸಿಸ್ಟಮ್ ಪಾರ್ಲಿಮೆಂಟರಿ ಡೆಮಾಕ್ರಸಿಯನ್ನು ನಾವು ಒಪ್ಪಿಕೋಡಿದೇವೆ, ಶಾಸಕಾಂಗಕ್ಕೆ ಉಚ್ಚಸ್ಥಾನ ಕೊಟ್ಟಿದ್ದೇವೆ. ಶಾಸಕಾಂಗಕ್ಕೆ ಉಚ್ಚಸ್ಥಾನ ಕೊಟ್ಟಾಗ ಅದಕ್ಕೆ ಸಲ್ಲತಕ್ಕ ಮರ್ಯಾದೆ ಸಲ್ಲಬೇಕೋ ಬೇಡವೋ ? ನಿಮ್ಮ ಕೈಕೆಳಗೆ ಇರತಕ್ಕ ಅತ್ಯಂತ ಕೆಳಮಟ್ಟದ ಅಧಿಕಾರಿಯನ್ನು ಚೇರ್ಮನ್ನಾಗಿ ಹಾಕಿ ಶಾಸಕನನ್ನು ಸದಸ್ಯನನ್ನಾಗಿ ಈ ಸಮಿತಿ ರಚನೆ ಮಾಡುತ್ತೀರಾ, ಇದು ಪ್ರಜಾಪ್ರಭುತ್ವಕ್ಕೆ ಅಗೌರವ ತರತಕ್ಕದ್ದು ಅಲ್ಲವೇ ? ಈ ಪ್ರಶ್ನೆಯನ್ನು ತಮ್ಮ ಮುಂದೆ ಇಡಲಿಕ್ಕೆ ಇವತ್ತು ಇಚ್ಛಿಸುತ್ತೇನೆ. ಇವತ್ತು ನಾನು ಕೇಳುತ್ತೇನೆ. ಇಂಥ ಸಮನ್ವಯ ಸಮಿತಿಯನ್ನು ಮಾಡಬೇಕು ಎಂದು ಬಣಕಾರ್‌ರವರು ಹೇಳುತ್ತಾರೆ ನಿಜವಾಗಿಯೂ ಉದಾತ್ತವಾದ ಧ್ಯೇಯ ಇದೆ, ಇವತ್ತು ಏನಾಗಿದೆ ಶಾಸನ ಸಭೆಯ ಸದಸ್ಯರಾಗಿರುವವರು ಆ ಕ್ಷೇತ್ರಗಳಲ್ಲಿನ ಆಗುಹೋಗುಗಳನ್ನು ನೋಡುವುದಕ್ಕಾಗಲೀ, ತಿಳಿಯುವುದಕ್ಕಾಗಲೀ ಅವಕಾಶ ಇಲ್ಲದಂತ ವ್ಯವಸ್ಥೆ ಇದೆ. ಇದು ಯಾವ ವಿಧಿ ವಿಪರ್ಯಾಸ ಎಂದು ನಾನು ಕೇಳುತ್ತೇನೆ. ಚುನಾವಣೆಯಲ್ಲಿ ನಿಂತು ಜನತೆಗೆ ಕೊಟ್ಟಿರತಕ್ಕ ವಚನವನ್ನು ಪಾಲನೆಮಾಡುಬೇಕು ಎನ್ನುವುದು ಅತನ ಹಸಿವು ಇರುತ್ತದೆ. ಅತನ ತಪಸು ಇರುತ್ತದೆ. ಆದರೆ ಜನತೆಗೆ ಕೊಟ್ಟಿರತಕ್ಕ ವಚನ ಪಾಲನೆಮಾಡುವುದು ಹೇಗೆ, ನಿಮ್ಮ ಕಾರ್ಯಾಂಗದಲ್ಲಿ ಇರತಕ್ಕ ಅಧಿಕಾರವ್ಯಂದ, ಅಪರ ಮುಂಖಾಂತರ ಅತ ತನ್ನ ವಚನವನ್ನು ಪಾಲನೆ ಮಾಡಬೇಕಾಗುತ್ತದೆ. ಯಾವುದೇಪಕ್ಷ ಇರಲ್ಲ, ಯಾವ ಪಕ್ಷದ ಶಾಸಕನಾಗಿರಲಿ. ಜನತೆಯ ಹಿತವನ್ನು ಸಾಧನೆ ಮಾಡಬೇಕು ಎನ್ನುವ ವ್ಯಾಕುಲತೆ ಇದ್ದೇ ಇರುತ್ತದೆ.

ಈ ಪಕ್ಷದ ತತ್ವ ಬೇರೆ ಇರಬಹುದು, ಹೋಗತಕ್ಕ ಮಾರ್ಗ ಬೇರೆ ಇರಬಹುದು, ನಾನು ಶಿವಮೊಗ್ಗಾಕ್ಕೆ ಹೋಗಬೇಕಾದರೆ ನೇರವಾಗಿ ಹೋಗಬಹುದು ಅಥವಾ ಬೀರೂರು ಮಾರ್ಗವಾಗಿ ಹೋಗಬಹುದು, ಮಾರ್ಗಗಳು ಹಲವಾರು ಇದ್ದರೂ ಗುರಿ ಒಂದೇ ಇರುವಾಗ ಜನತೆಯ ಕಲ್ಯಾಣ ಮಾಡತಕ್ಕ ಶಾಸಕನಿಗೆ ಬರತಕ್ಕ ತೊಂದರೆ ಏನು.....

4-30 P. M.

MR. DEPUTY SPEAKER.— Rather than dilating too much upon the duties of the Legislators', please speak something on the development of the Taluka as envisaged by the Resolution.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಈಗ ಮಾರ್ಗಗಳು ಏನೇ ಇದ್ದರೂ ಕೂಡ ಶಾಸಕರಾಗಿರತಕ್ಕವರಿಗೆ ಜನತೆಯ ಕಲ್ಯಾಣ ಆಗಬೇಕು ಎನ್ನುವ ಕಕ್ಕುಲತೆ ಇದ್ದೇ ಇರುತ್ತದೆ. ಆದರೆ ಇವೊತ್ತು ಏನಾಗಿದೆ ಎಂದರೆ ಇವೊತ್ತು ವಿಧ ವಿಧವಾದ ಶಾಖೆಗಳು ಇವೆ, ಈ ವಿಧ ವಿಧವಾದ ಶಾಖೆಗಳು ಪ್ರತಿಯೊಂದು ಕ್ಷೇತ್ರದಲ್ಲೂ ಇದೆ. ಈಗ ಒಂದು ಕಾಗದ ಬರೆದರೆ ಅದಕ್ಕೆ ಉತ್ತರ ಪಡೆಯಬೇಕಾದರೆ ಒಂದೆರಡು ತಿಂಗಳು ಬೇಕಾಗುತ್ತದೆ. ಇದರ ಬಗ್ಗೆ ನಾನು ಮೊನ್ನೆ ಒಂದು ಪ್ರಶ್ನೆ ಹಾಕಿದ್ದೆ ಸಾವಿರಾರು ಕಾಗದ ಬರೆದಿದ್ದಾರೆ ಉತ್ತರ ಬಂದಿಲ್ಲ ಎಂದು, ಅದಕ್ಕೆ ಮುಖ್ಯಮಂತ್ರಿಗಳು ಏನೋ ಉತ್ತರ ಕೊಟ್ಟರು, ಇದು ನನ್ನ ಸ್ವಂತ ಮನೆ ಕೆಲಸ ಆಗಬೇಕಾದ್ದು ಇರುವುದಿಲ್ಲ, ಇದು ನನ್ನ ಇತರ ಶಾಸಕರಿಗೂ ಅನ್ವಯಿಸುತ್ತದೆ.

ಉಪಾಧ್ಯಕ್ಷರು.—ತಾವು ಎಷ್ಟು ಸಾವಿರ ಪತ್ರ ಕಳಂಹಿಸಿಕೊಟ್ಟಿದ್ದೀರಿ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇಂತಹ ಪತ್ರಕ್ಕೆ ಉತ್ತರ ಬರುವಂತಹ ಅವಕಾಶ ಇಲ್ಲದೇ ಇರುವಾಗ ಒಬ್ಬ ಶಾಸಕ ಕೆಲಸ ಮಾಡುವುದಾದರು ಹೇಗೆ ? ದಯವಿಟ್ಟು ತಾವು ಇದರಲ್ಲಿ ಯಾವ ರೀತಿಯ ಪಿಸ್ಪಿಜ್ ಪ್ರಶ್ನೆಯೂ ಇಲ್ಲ ಎಂದು ಒಪ್ಪಿಕೊಳ್ಳಬೇಕು. ಇವೊತ್ತು ತಾಲೋಕಿನಲ್ಲಿ ಸಮನ್ವಯ ಸಮಿತಿ ಮಾಡಿದರೆ ಒಬ್ಬ ಶಾಸಕನಿಗೆ ಜನತೆಯ ಪ್ರತಿನಿಧಿಯಾಗಿ ತಾಲೋಕಿನ ಇತಿಮಿತಿಗಳೇನು ಎಂಬುದನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದೇ ಹೋದರೆ ಏನೂ ಗೊತ್ತಾಗುವುದಿಲ್ಲ. ಈಗ ಏನು ಆಗುತ್ತಿದೆ, ಯಾರಿಗೆ ಎಷ್ಟು ಗ್ರಾಂಟ್ ಕೊಟ್ಟಿದ್ದಾರೆ, ಎಂಬುದು ಒಂದೂ ಕೂಡ ಗೊತ್ತಾಗುವದಿಲ್ಲ. ಇದರ ಬಗ್ಗೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ, ಇವೊತ್ತಿನ ದಿವಸ ಈ ಸೈಟುಗಳ ವಿತರಣೆಯ ಬಗ್ಗೆ ಸರ್ಕಾರ ಒಂದು ಧೋರಣೆಯನ್ನು ಇಟ್ಟುಕೊಂಡಿದೆ. ಈ ಸೈಟ್ ವಿತರಣೆಯ ಕಾರ್ಯವನ್ನು ಒಬ್ಬ ಬಿ.ಡಿ.ಓ ಗೆ ಕೊಟ್ಟಿರುತ್ತಾರೆ, ತಮಗೆ ಬೇಕಾದರೆ ತರಿಸಿಕೊಡುತ್ತೇನೆ. ಒಂದೇ ಸೈಟ್ ಫಾರ್‌ಮೇಷನ್‌ಗೆ ನಾಲ್ಕೈದು ಸಾರಿ ಅಬಾದಂ ಮಾಡಿ ಅದೇ ಸೈಟಿಗೆ ಖರ್ಚು ಹಾಕಿಸಿ ತಿಂದಿರತಕ್ಕದ್ದು ಹಲವಾರು ನಿದರ್ಶನಗಳು ಇವೆ. ಇಂಥಾದ್ದು ಪ್ರತಿಯೊಂದು ತಾಲೂಕಿಯಲ್ಲೂ ಇರಬಹುದು, ಈಗ ಈ ರೀತಿ ನಡೆಯುತ್ತಿದೆ ಎಂದು ಹೇಳಬೇಕಾಗಿದೆ. ಇವೊತ್ತು ಜನರಿಗೆ ಕೊಟ್ಟರತಕ್ಕ ವಚನ ಪೂರ್ತಿ ಮಾಡಬೇಕು ಎನ್ನುವ ಜವಾಬ್ದಾರಿ, ಕಕ್ಕುಲತೆ ಆಗಲಿ ನೀವು ಇಟ್ಟರತಕ್ಕ ಅಧಿಕಾರಿಗಳೆಲ್ಲರಿಗೂ ಇದೆಯೇ ಎಂದು ನಾನು ಕೇಳುತ್ತೇನೆ. ಅದೇ ಒಬ್ಬ ಶಾಸಕ ಸಮಿತಿಯ ಅಧ್ಯಕ್ಷನಾಗಿದ್ದರೆ ಜನತೆ ನೇರವಾಗಿ ಪ್ರಶ್ನೆ ಮಾಡತಕ್ಕ ಅಧಿಕಾರ ಇರುತ್ತದೆ. ಅಲ್ಲದೇ ಅವನಿಗೆ ಇದರಿಂದ ಹೆದರಿಕೆ ಇರುತ್ತದೆ. ಒಂದು ಸಮಿತಿ ಮಾಡಿದ ಮೇಲೆ ತಾಲ್ಲೂಕಿನ ಕ್ಷೇತ್ರದಲ್ಲಿ ಕಾರ್ಯಾಂಗಗಳು ಏನು ಇವೆ ಅವು ಇದರಿಂದ ಹೆದರಲೇ ಬೇಕಾಗುತ್ತದೆ. ಅವನು ಇದರ ಬಗ್ಗೆ ಕನಸಿನಲ್ಲಿಯೂ ಯೋಚನೆ ಮಾಡಬೇಕಾಗುತ್ತದೆ. ಜನರ ಹಿತವನ್ನು ನೋಡುವ ದೃಷ್ಟಿಯಿಂದ ಈ ಕಾರಣಕ್ಕಾಗಿ ಸಮನ್ವಯ ಸಮಿತಿ ಮಾಡಬೇಕಾಗುತ್ತದೆ ಆ ದೇ ಪುಟ್ಟ ಪುಟ್ಟ ರಾಜ್ಯನಿರ್ಮಾಣ ಮಾಡಿದಂತಾಗುತ್ತದೆ ಎಂದು ಭಾವಿಸಬೇಕಾಗಿಲ್ಲ. ಇದರಿಂದ ಸರ್ಕಾರಕ್ಕೂ ಕೂಡ ಬಹಳ ಅನುಕೂಲ ಇದೆ, ಇದರ ಬಗ್ಗೆ ನೇರವಾಗಿ ಶಾಸನ ಸಭೆಯಲ್ಲಿ ಕೇಳಬಹುದು ಇದರ ಬಗ್ಗೆ ಛೀಮಾರಿ ಹಾಕಿ ಆಕ್ಷೇಪ ಮಾಡಲಿಕ್ಕೆ ಅವಕಾಶ ಇರುತ್ತದೆ ಅಲ್ಲದೇ ತಾವು ಮಾಡಿದ್ದು ಏನು ಎಂದು ವರದಿ ಕೇಳುವ ಅವಕಾಶ ಇರುತ್ತದೆ, ಆಗ ಆತನು ವರದಿಯನ್ನು ಕೊಡಬೇಕಾಗುತ್ತದೆ, ಆತನು ಆಗ ಅಷ್ಟು ಸುಲಭವಾಗಿ ತಪ್ಪಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅವನು ತಪ್ಪು ಮಾಡಿದರೂ ಕೂಡ ಶಾಸನ ಸಭೆಯಲ್ಲಿ ವಿಚಾರ ಮಾಡಲಿಕ್ಕೆ ಸಾಧ್ಯ ಇದೆ. ಆದುದರಿಂದ ಈ ಒಂದು ಸಮಿತಿಯನ್ನು ಮಾಡಬೇಕು ಎಂದು ಹೇಳುತ್ತೇನೆ. ಮತ್ತೆ ಇದರ ಬಗ್ಗೆ ಒಂದು ಸೂಚನೆ ಕೊಡಲಿಕ್ಕೆ ಬಯಸುತ್ತೇನೆ. ಈಗ ಮಾನ್ಯ ಬಣಕಾರ್ ಅವರು ಪಂಚಾಯಿತಿ ಅಧ್ಯಕ್ಷರು ಎಲ್ಲರೂ ಇರಬೇಕು ಎಂದು ಹೇಳಿದರು ಅದು ಆಗುವುದಿಲ್ಲ. ಈಗ ಒಂದೊಂದು ತಾಲೋಕಿನಲ್ಲಿ ನೂರಾರು ಪಂಚಾಯಿತಿಗಳು ಇವೆ, ಆ ನೂರಾರು ಪಂಚಾಯಿತಿಗಳು ಸೇರಿಬಿಟ್ಟರೆ ಒಂದು ದೊಡ್ಡ ಶಾಸನ ಸಭೆ ಆಗುತ್ತದೆ. ಈ ರೀತಿ ಆದರೆ ಒಂದೊಂದು ಸಭೆಯವರು ಕೆಲಸಕಾರ್ಯಗಳಲ್ಲಿ ನಿರ್ವಹಣೆ ಮಾಡುವುದಾಗಲಿ ಇಲಾಖೆಗಳ ಬಗ್ಗೆ ಅಧ್ಯಯನ ಮಾಡುವುದಾಗಲಿ ಇದು ಯಾವುದು ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಪಂಚಾಯಿತಿಯ ಪ್ರತಿನಿಧಿಗಳಾಗಿ ತಾಲ್ಲೂಕು ಬೋರ್ಡ್ ಅಧ್ಯಕ್ಷರು ಇದ್ದೆ ಇರುತ್ತಾರೆ. ಅಲ್ಲದೇ ಎಲ್ಲಾ ಪಂಚಾಯಿತಿಗಳ ಮೇಲ್ವಿಚಾರಣೆಗೆ ತಾಲೋಕಬೋರ್ಡ್ ಇದ್ದೆ ಇರುತ್ತದೆ. ಮತ್ತೆ ತಾಲೋಕ್ ಬೋರ್ಡ್ ಅಧ್ಯಕ್ಷ ಮತ್ತು ಬಿ.ಡಿ.ಓ, ಇವರು ಇದ್ದರೆ ಸಾಕಾಗುತ್ತದೆ. ಎಲ್ಲಾ ದೃಷ್ಟಿಯಿಂದ ಬಹಳ ಜನ ಪಂಚಾಯಿತಿ ಸದಸ್ಯರು ಎಲ್ಲರೂ ಮಿಟಿಂಗ್ ಕರೆಯಬೇಕು ಎಂದರೆ it is a financial burden. ಈ ದೃಷ್ಟಿಯಿಂದ ತಾವು ಜನಕ್ಕೆ ಮಿರದಂತೆ ಇಂತಹ ಒಂದು ಸಮನ್ವಯ ಸಮಿತಿ ಮಾಡಿ ರಾಜ್ಯ ಕಲ್ಯಾಣ ಮಾಡಲಿಕ್ಕೆ ಬೂನಾದಿ ಹಾಕಿಕೊಳ್ಳುತ್ತೀರಾ ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದಂಥ ಬಿ. ಜಿ. ಬಣಕಾರ್ ಅವರು ಏನು ಒಂದು ಈ ತಾಲೋಕು ಸಮನ್ವಯ ಸಮಿತಿಯ ನಿರ್ಣಯವನ್ನು ಮಂಡನೆ ಮಾಡಿದ್ದಾರೆ ಅದನ್ನು ನಾನು ತಾತ್ವಿಕವಾಗಿ ಸ್ವಾಗತಿಸಿ ಎರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಸ್ವಾಮಿ ಈ ಪ್ರಜಾಪ್ರಭುತ್ವ ದೃಷ್ಟಿಯಿಂದ ಇಂತಹ ಒಂದು ಸಮಿತಿ ಅವಶ್ಯಕ ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ನಮ್ಮಲ್ಲಿ ಏನಾಗಿದೆ ಎಂದರ ಬ್ರಿಟೀಷರು ಅಧಿಕಾರ ದಲ್ಲಿದ್ದಾಗ ಏನೇನು ಪರಂಪರೆಯನ್ನು ಬಿಟ್ಟು ಹೋಗಿದ್ದರೂ ಆ ಪರಂಪರೆಯನ್ನು ನಾವು ಕಳೆದ ೨೫ ವರ್ಷ ಗಳಿಂದಲೂ ಮುಂದುವರಿಸಿಕೊಂಡು ಬಂದಿದ್ದೇವೆ. ಇದರ ಬಗ್ಗೆ ಮೂಲಭೂತವಾಗಿ ಯಾವ ಪಾಲನೆ ಎಂದು ಕಿಂಚಿತ್ತಾದರೂ ಯೋಚನೆ ಮಾಡಿಲ್ಲ. ಇದು ಜನತಂತ್ರದ ಬೇರು ಬೆಳೆಯುವ ದೃಷ್ಟಿಯಿಂದ ಬಹಳ ಅಪಾಯದ ಸೂಚನೆ. ಈ ದೃಷ್ಟಿಯಿಂದ ಜನತೆಯ ಪ್ರತಿನಿಧಿಗಳು ಹೆಚ್ಚು ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಮತ್ತು ಕ್ಷೇತ್ರದ ತಾಲೋಕಿನ ಸಮಗ್ರವಾದ ಇಲಾಖೆಯ ದೃಷ್ಟಿಯಿಂದ ಅವರು ಒಂದು ಕಡೆ ಕಂಳಿತು ಅಧಿಕಾರಿಗಳೊಡನೆ ಸಮಾಲೋಚನೆ ನಡೆಸುವುದು ನ್ಯಾಯಸಮ್ಮತವಾಗಿದೆ. ಅಲ್ಲದೇ ಮಾನ್ಯ ಬಿ. ಜಿ. ಬಣಕಾರ್ ಅವರು ತಮ್ಮ ನಿರ್ಣಯದಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಮತ್ತೆ ಈ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡು ಅವುಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತ ಗೊಳಿಸುವುದು ಒಳ್ಳೆಯದು, ಅಲ್ಲದೇ ಈ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಾವು ಮಾಡುವಾಗ ಇದಕ್ಕೆ ಬೇಕಾಗುವ ಇತರ ಅಧಿಕಾರಿಗಳ ನೆರವು ಬೇಕಾಗುತ್ತದೆ. ಇದು ಎಲ್ಲಾ ತಾತ್ವಿಕ ದೃಷ್ಟಿಯಿಂದ ಸಾಕಷ್ಟು ಪ್ರಶಂಸಾರ್ಹವಾದುದು. ಆದರೆ ಅಧಿಕಾರಿಗಳು ಇದ್ದರೆ ಸರ್ಕಾರ ಎಲ್ಲವೂ ಮೇಲುಗೈ ಆಗಿರುತ್ತದೆ, ಪ್ರಜಾಪ್ರಭುತ್ವ ಕೇವಲ ಒಂದು ನಾಮಕಾವಸ್ತೆಯಾಗಿ ಕುಳಿತು ಬಿಟ್ಟಿರುವುದರಿಂದ, ಇದರ ಮೂಲ ಭೂತವಾದ ಪರಿವರ್ತನೆ ಹೇಗೆ ಮಾಡಲಿಕ್ಕೆ ಸಾಧ್ಯ ಎನ್ನುವ ವಿಚಾರ ಸನ್ನಿಹತವಾಗಿದೆ. ಇವೊತ್ತು ಯಾವ ಶಾಸಕರೇ ಆಗಲಿ, ಅಥವಾ ಮಂತ್ರಿಗಳೇ ಆಗಲಿ, ಸರ್ಕಾರ ಎನಿಸಿಕೊಳ್ಳುವ ಅಥವಾ ಸರ್ಕಾರದ ಗದ್ದುಗೆಯಲ್ಲಿ ಇರತಕ್ಕ ಒಂದು ಸಿದ್ಧಾಂಥ ಇದನ್ನು ನಾವು ತಲುಪಬೇಕು. ಅದಕ್ಕೆ ಒಂದು ಸಮಿತಿ ರಚನೆ ಮಾಡಿ ಅದಕ್ಕೆ ಅನುಕೂಲವಾದಂಥ ಒಂದು ನೀತಿ ನಿಯಮಗಳನ್ನು ಹಾಕಿ ಆದೇಶ ಕೊಡತಕ್ಕದ್ದು. ಇವೊತ್ತು ಯಾರು ಅಧಿಕಾರಿಗಳು ಇದ್ದಾರೆ ಅವರು ಹಾಕತಕ್ಕ ತಾಳಕ್ಕೆ ಸರಿಯಾಗಿ ಹೆಜ್ಜೆ ಇಡತಕ್ಕದ್ದು ಅಂದಿನಿಂದ ಇಂದಿನವರೆಗೂ ಇರುವುದರಿಂದ ಯಾವುದು ಪರಿಣಾಮಕಾರಿಯಾಗಿಲ್ಲ. ಈ ದೃಷ್ಟಿಯಿಂದ ನಮ ಗುರಿಯನ್ನು ಸಾಧಿಸುವುದಕ್ಕೆ ಬೇಕಾದಂಥ ಆದೇಶ ಕೊಟ್ಟು ಅದಕ್ಕೆ ತಕ್ಕ ತೆ ಎಲ್ಲಾ ಕರಪ್ಚಾರ ನಡೆಸುವುದಕ್ಕೆ ಬೇಕಾದಂಥ ಏರ್ಪಾಡು ಮಾಡಬೇಕು. ಇವೊತ್ತು ಯಾರು ನಿಷ್ಠೆಯಿಂದ ಕೆಲಸ ಮಾಡುತ್ತಾರೆ. ಅಂಥ ಜನರನ್ನು ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ. ಮಂತ್ರಿಗಳಿಗೆ ಪತ್ರಿಕೆ ಗಳಲ್ಲಿ ಹೇಳಿಕೆ ಕೊಡುವುದಕ್ಕೆ, ಕಾರಿನಲ್ಲಿ ತಿರುಗಾಡುವುದಕ್ಕೆ ಸಮಯ ಸಾಕಾಗಿದೆ. ಅವರು ನಿಜವಾಗಿಯೂ ಅಧಿಕಾರಿಗಳ ಕೈಯಲ್ಲಿ ಇದ್ದಾರೆ ಮತ್ತು ಅವರ ಗುಲಾಮರಾಗಿ ಅಧಿಕಾರವನ್ನು ನಡೆಸುತ್ತಾರೆ. ಇಂಥ ಸಮಾಜ ರಚನೆಯಿಂದ ಖಂಡಿತವಾಗಿ ಸಾರ್ಥಕವಾಗುವುದಿಲ್ಲ. ಜನತೆಯನ್ನು ಹೆಚ್ಚು ಮೇಲಕ್ಕೆ ತರಬೇಕು ಎಂದೂ ಏನು ಜನತಾ ಪ್ರತಿನಿಧಿಗಳ ಗುರಿ ಮತ್ತು ಉದ್ದೇಶಗಳು ಇರುತ್ತವೆ ಆ ಉನ್ನತ ಉದ್ದೇಶಗಳ ಸರ್ವಾಂಗೀಣವಾಗಿ ಈಡೇರಿಕೆಗೋಸ್ಕರ ಎಲ್ಲಾ ಸೇರಿ ಸಮಾಲೋಚನೆ ಮಾಡಿ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕೆನ್ನುವ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಆದರೆ ಮಾನ್ಯ ಅಧ್ಯಕ್ಷರೆ. ಇವತ್ತು ನಮ್ಮ ರಾಷ್ಟ್ರದಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ತತ್ವ ಎಲ್ಲಾ ಸರಿ, ಸಿದ್ಧಾಂತ ಎಲ್ಲಾ ಸರಿ, ನಾನು ಡಾ॥ ಲೋಹಿಯಾ ಒಗ್ಗೆ, ಅಂಬೇಡ್‌ಕರ್ ಬಗ್ಗೆ ಹೇಳುವುದಕ್ಕಿಂತ ಹೆಚ್ಚು ಬಲವಾಗಿ ಮತ್ತು ಹೆಚ್ಚು ಗಟ್ಟಿಯಾಗಿ ನಮ್ಮ ಸಮಾಜಕಲ್ಯಾಣ ಮಂತ್ರಿಗಳು ಹೇಳುತ್ತಾರೆ, ಅವರಿಗೆ ನನಗಿಂತಲೂ ತತ್ವ ಚೆನ್ನಾಗಿ ಗೊತ್ತಿದೆ. ಅವರು ಚೆನ್ನಾಗಿ ಓದಿದ್ದಾರೆ, ಆ ಬಗ್ಗೆ ನನಗೆ ಮೆಚ್ಚಿಗೆ ಇದೆ. ''ಓದಿ ಓದಿ ಕೂಚುಬಟ್ಟ ಮರಾಳಾದ'' ಎಂದ ಹಾಗೆ ಅದರಿಂದ ಉಂಟಾಗತಕ್ಕ ಸಾರ್ಥಕ ಏನು ? ಆ ತತ್ವವನ್ನು ಅನುಷ್ಠಾನಕ್ಕೆ ತರುವುದಕ್ಕೆ ಯಾವ ಹೆಜ್ಜೆಯನ್ನು ಇಟ್ಟಿದ್ದಾರೆ ? ಹೆಜ್ಜೆಯೇ ಇಲ್ಲ ಇವತ್ತು ಯಾವ ಒಂದು ಸಮಿತಿಯಾಗಲೀ, ಯಾವ ಸರ್ಕಾರದಲ್ಲಿ ಆಗಲಿ, ಯಾವ ಸಂಘ ಸಂಸ್ಥೆಗಳಲ್ಲಿ ಆಗಲಿ, ಎಲ್ಲ ಕಡೆಗಳಲ್ಲಿಯೂ ಕೂಡ ನಾವು ಕಾಣುವುದು ಏನು ? ನಾವು ಉನ್ನತ ಧ್ಯೇಯ ತತ್ವಗಳನ್ನು ಎಲ್ಲಿಯೂ ಕಾಣುವುದಿಲ್ಲ. ರಾಷ್ಟ್ರಜೀವನದಲ್ಲಿ ಯಾವ ಮೌಲ್ಯಗಳು ಇರಬೇಕು, ಯಾವ ಮೌಲ್ಯಗಳನ್ನು ಬೆಳಸಿ ಕೊಳ್ಳಬೇಕು ? ಆ ಮೌಲ್ಯಗಳ ಬಗ್ಗೆ ಸಾಮಾಜಿಕ ಪ್ರಜ್ಞೆ ಇಲ್ಲದೆ ಹೋಗುವ ಸಂದರ್ಭದಲ್ಲಿ ಇಂಥ ಸಮಿತಿಗಳು ಏನು ಮಾಡಿಯಾವು, ಯಾವುದಕ್ಕೆ ಬೆಲೆ ಕೊಟ್ಟಾವು ? ಎಂದು ವಿಚಾರ ಮಾಡಬೇಕಾಗಿದೆ. ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಮೌಲ್ಯಗಳ ಬಗ್ಗೆ ಸರಿಯಾದಂತ ಒಂದು ಬುನಾದಿಯನ್ನು ಹಾಕುವ ದೃಷ್ಟಿಯಿಂದ ಇದು ಅಪ್ರಾಕೃತ ಆಗಲಾರದು ಎಂದು ಭಾವಿಸುತ್ತೇವೆ. ಮೂಲಭೂತ ಬದಲಾವಣೆಗಳ ದೃಷ್ಟಿಯಿಂದ ಸಮಗ್ರ ಕ್ರಾಂತಿಯ ಒಂದು ಗುರಿಯನ್ನು ಹೊಂದಿ ನಾವು ಏನಾದರೂ ಕ್ರಮವನ್ನು ಕೈಗೊಳ್ಳಬೇಕು. ಆದುದರಿಂದ ನಮ್ಮ ಹಿರಿಯರು ಮತ್ತು ಅಭಿನವ ಗಾಂಧಿ ಎನಿಸಿಕೊಂಡಂತ ಶ್ರೀ ಜಯಪ್ರಕಾಶ ನಾರಾಯಣ್ ಅವರು ಆಶೇತಹಿನಾಕರು ಪರ್ಯಂತ ಜನತೆಯನ್ನು ಮೇಲಕ್ಕೆ

ತರಬೇಕು. ಜನತೆಯಲ್ಲಿರುವ ಸ್ವಶಕ್ತಿ ಮತ್ತು ಸ್ವಪ್ರಜ್ಞೆ ಏನಿದೆ ಅದನ್ನು ಅಲ್ಲದಕ್ಕಿಂತಲೂ ಹೆಚ್ಚಾಗಿ ಜನತಂತ್ರದಲ್ಲಿ ಪ್ರಸ್ತಾಪನೆ ಮಾಡಬೇಕು. ಜನತಾ ಸಮಿತಿಗಳನ್ನು ನಿರ್ಮಾಣ ಮಾಡಿ ಆ ಮೂಲಕ ಎಲ್ಲವನ್ನೂ ಸಾಧನೆ ಮಾಡುವ ದೃಷ್ಟಿಯನ್ನಿಟ್ಟುಕೊಂಡು ದೊಡ್ಡ ಆಂದೋಳನವನ್ನು ಆರಂಭ ಮಾಡಿದ್ದಾರೆ. ಅದಕ್ಕೆ ಪೂರಕವಾಗಿ ಇದು ಆದರೆ ಸಂತೋಷ, ಮುಖ್ಯ ಮಂತ್ರಿಗಳು ಮಾತನಾಡುವಾಗ ಒಂದು ಮಾತನ್ನು ಹೇಳಿದರು, ಈಗ ಸರ್ಕಾರ for the people, of the people, by the people ಇರುವುದನ್ನು ನೋಡಿ ಹೊಟ್ಟೆ ಉರಿ ಆಗಿದೆ, ಕಣ್ಣು ಉರಿ ಆಗಿದೆ, ಆದುದರಿಂದ ಇಂಥ ಆಂದೋಳನಗಳು ಆಗುತ್ತವೆ ಎಂದು. ನಿಜ for the people ಇದ್ದವರೇ ಈಗ of the people by the people ಆಗಿದ್ದಾರೆ. ಅವರು of the people, by the people ಆಗಬೇಕು. ಆ ದೃಷ್ಟಿಯಿಂದ ಆ ಕ್ಷೇತ್ರದಲ್ಲಿ ಆ ತಾಲ್ಲೂಕಿನಲ್ಲಿ ಯಾರು ಜನರ ಪ್ರತಿನಿಧಿ ಇರುತ್ತಾರೆ. ಅವರ ಮುಖಂಡತ್ವದಲ್ಲಿ, ಅವರ ಅಧ್ಯಕ್ಷತೆಯಲ್ಲಿ ಉಳಿದ ಎಲ್ಲಾ ಅಧಿಕಾರಿಗಳು ಕೆಲಸಮಾಡಬೇಕು. ಒಂದು ವಿಷಯವನ್ನು ಸರ್ಕಾರ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು ಯಾರೇ ಆಗಲಿ ಅಧಿಕಾರಿಗಳಾಗಲಿ, ಶಾಸಕ ಪ್ರತಿನಿಧಿಗಳಾಗಲೀ ಅವರು ಎಲ್ಲಾ ಮೂಲಭೂತವಾದ ವಿಷಯಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಜನತಂತ್ರದ ಹಿತದೃಷ್ಟಿಯಿಂದ ಮತ್ತು ಅದರ ಬೇರು ಬೆಳೆಯುವ ದೃಷ್ಟಿಯಿಂದ ಮತ್ತು ಆಳವಾಗಿ ಇಳಿಯುವ ದೃಷ್ಟಿಯಿಂದ ಕೆಲಸ ಮಾಡಬೇಕು. ಸಾರ್ವಜನಿಕ ಮತ್ತು ಸಾಮಾಜಿಕ ಜೀವನದಲ್ಲಿ ಇರಬೇಕಾದಂಥ ಶಿಸ್ತು ಇಲ್ಲ. ಮಂತ್ರಿಗಳು, ಅಧಿಕಾರಿಗಳು ಹೇಳತಕ್ಕ ನೀತಿ ನಿಯಮಗಳ ಚೌಕಟ್ಟು ಏನಿದೆ, ಆ ಚೌಕಟ್ಟನ್ನು ದಾಟಿ ಹೋಗುವವರಲ್ಲಿ ನಮಗೋಸ್ಕರ ಎಲ್ಲ ಕಾನೂನು ಕಟ್ಟಲೆಗಳು ನೀತಿ ನಿಯಮಗಳು ಇವೆ ಎನ್ನುವುದನ್ನು ಮರೆತಿದ್ದೇವೆ. ಈ ಗುಲಾಮಗಿರಿ ಮನೋಭಾವ ಜನರಲ್ಲಿ ಎಲ್ಲಿಯವರೆಗೆ ಅಧಿಕಾರಿಗಳಲ್ಲಿ ಇರುತ್ತದೋ ಅಲ್ಲಿಯವರೆಗೆ ಸಾರ್ಥಕ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನನಗಂತೂ ವಿಶ್ವಾಸ ಬರುವುದಿಲ್ಲ. ಆದುದರಿಂದ ಇವತ್ತು ನಮ್ಮ ಸಾಮಾಜಿಕ ವಾತಾವರಣದ ದೃಷ್ಟಿಯಿಂದ ಮತ್ತು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಜನರ ಪ್ರತಿನಿಧಿಗಳ ಸ್ಥಾನ ಮತ್ತು ಗೌರವವನ್ನು ಉನ್ನತವಾದಂಥ ದೃಷ್ಟಿಯಲ್ಲಿ ಇಟ್ಟು ಅದಕ್ಕೆ ಮಾನ್ಯತೆ ಕೊಡಬೇಕಾದರೆ ಇಂತಹ ಸಮಿತಿಗಳೇ ಉತ್ತಮ. ನಾನು ನನ್ನ ತಾಲ್ಲೂಕಿನ ಅಧ್ಯಕ್ಷನಾಗುತ್ತೇನೆ ಎಂದು ಇಟ್ಟುಕೊಳ್ಳಿ ಅಧಿಕಾರಿಗಳೆಲ್ಲ ಇರುತ್ತಾರೆ, ಸಮಿತಿ ಸಮಾಲೋಚನೆ ಮಾಡುವುದು ಎಲ್ಲಾ ಸರಿ, ಪರ್ಯಾಯವಾಗಿ ಶಾಸಕ ಆ ತಾಲ್ಲೂಕಿನ ಸರ್ವಾಧಿಕಾರಿ ಆದಹಾಗೆ ಆಯಿತು, ನಮ್ಮಂಥವರು ಅಧ್ಯಕ್ಷರಾಗಿದ್ದರೆ ಪರವಾಗಿಲ್ಲ ಇನ್ನು ಕೆಲವರು ಶಾಸಕರು ಅಧ್ಯಕ್ಷರಾಗಿಬಿಟ್ಟು ಅಧಿಕಾರಿಗಳು ಅವರ ಕೈಯೊಳಗೆ ಇದ್ದರೆ ಅದರಿಂದ ಅನಾಹುತಗಳು ಆಗುವುದೂ ಉಂಟು. ಕೆಲವು ಮಂತ್ರಿಗಳು ಅವರ ಕೈಕೆಳಗಿರುವ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಏನೆಲ್ಲಾ ಮಾಡುತ್ತಾ ಇದ್ದಾರೆಂದು ತಮಗೆಲ್ಲಾ ಗೊತ್ತಿದೆ ಶಾಸಕರೂ ಕೂಡ ಆಯಾಯ ತಾಲ್ಲೂಕಿನಲ್ಲಿ ಅವರ ಕೆಳಗೆ ಇರತಕ್ಕ ಅಧಿಕಾರಿಗಳ ಮೂಲಕ ಜನತೆಯನ್ನು ಸುಲಿದು ಅವರಿಗೆ ಕಪ್ಪ ಕಾಣಿಕೆ ಒದಗಿಸಬೇಕು ಎಂದರೆ ಅದರ ಪರಿಣಾಮ ಏನಾಗುತ್ತದೆ ಶ್ರೀಮಾನ್ ನಂಜಪ್ಪನವರು ಹೇಳಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷರು ಸಮಿತಿಯಲ್ಲಿ ಇದ್ದರೆ ಸರಿ ಹೋಗುವುದಿಲ್ಲ ಎಂದು. ನನ್ನ ಅಭಿಪ್ರಾಯದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಇರಬೇಕು. ಅವರು ಇದ್ದರೆ ಆಯಾಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಕಾರ್ಯಗಳಲ್ಲಿರುವ ಕುಂದು ಕೊರತೆಗಳನ್ನು ಗೊತ್ತಾಗುತ್ತವೆ. ಅವರು ಬಂದು ಹೇಳುವುದರಿಂದ ಅಲ್ಲಿಯ ಅಭಿವೃದ್ಧಿಯ ಕೆಲಸದ ಬಗ್ಗೆ ಚಿಂತನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಸಾಮಾನ್ಯ ಸಮಿತಿಗಳನ್ನು ರಚನೆ ಮಾಡುವುದು ಯೋಗ್ಯ ಇದೆ ತಾತ್ವಿಕ ದೃಷ್ಟಿಯಿಂದ ನಾನು ಅದಕ್ಕೆ ಬೆಬಲ ಕೊಡುತ್ತೇನೆ. ಹೇಗೂ ಇದನ್ನು ಅಂಗೀಕಾರ ಮಾಡುವುದಿಲ್ಲ ಸರ್ಕಾರದವರು ಒಳ್ಳೆಯದನ್ನು ಒಪ್ಪುವುದಿಲ್ಲ. ಇವರ ಕೈಯಿಂದ ಯಾವುದೂ ಒಳ್ಳೆಯದು ಆಗುವುದಿಲ್ಲ ಎಂದು ಗೊತ್ತಿದೆ. ಆದರೂ ಕೂಡ ಇಂಥ ಮೂಲಭೂತವಾದ ವಿಚಾರಗಳನ್ನು ಚಿಂತನೆ ಮಾಡತಕ್ಕ ಶ್ರೀ ಬಣಕಾರರಂಥ ಸದಸ್ಯರು ಇದ್ದಾರೆ ಆ ಬಗ್ಗೆ ನನ್ನ ಮೆಚ್ಚುಗೆ ಉಂಟು ಅಂಥವರು ಅಲ್ಲಿರಬಾರದು, ಅಂತಹವರಿಗೆ ಅಲ್ಲಿ ಜಾಗ ಇಲ್ಲ. ಆದು ಏನೇ ಇರಲಿ ಪ್ರಜಾ ಪ್ರಭುತ್ವದ ದೃಷ್ಟಿಯಿಂದ ಇಂಥ ಸಮಿತಿಗಳನ್ನು ನಿರ್ಮಾಣ ಮಾಡಬೇಕು ಗ್ರಾಮ ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಮಂತ್ರಿಗಳೂ ಇದರ ಬಗ್ಗೆ ಉತ್ತರ ಕೊಡುವಾಗ ನಮಗಿಂತ ಹೆಚ್ಚಾಗಿ ಪ್ರಜಾಪ್ರಭುತ್ವದ ಬಗ್ಗೆ ಜನತಂತ್ರದ ಬಗ್ಗೆ, ರಾಷ್ಟ್ರದ ಜೀವನದ ಬಗ್ಗೆ ಹೇಳುತ್ತಾರೆ, ಕೆಲಸ ಮಾತ್ರ ಮಾಡುವುದಿಲ್ಲ. ಟೇಪ್ ರೆಕಾರ್ಡ್ ಮಾಡುವಂಥ ಭಾಷಣ ಮಾಡುತ್ತಾರೆ. ಆದರೆ ಅವರ ಕೈಯೊಳಗೆ ಇರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ಏನೆಲ್ಲ ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡುವುದಿಲ್ಲ. ಹಳ್ಳಿಗಳಲ್ಲಿರುವ ಜನಸಾಮಾನ್ಯರ ಉಧಾರದ ಸಲುವಾಗಿ ಸಾಮಾಜಿಕ ಪ್ರಜ್ಞೆ ಮತ್ತು ಜನತಂತ್ರದಲ್ಲಿ ವಿಶ್ವಾಸ ಮೂಡತಕ್ಕ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಇಂಥ ಸಮಿತಿಗಳ ನಿರ್ಮಾಣ ಅವಶ್ಯಕ ಎಂದು ಹೇಳಿ ಈ ನಿರ್ಣಯವನ್ನು ತಾಂತ್ರಿಕವಾಗಿ ನಾನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ರಾಚಯ್ಯ (ಸಮಾಜ ಕಲ್ಯಾಣ ಮತ್ತು ಸಮುದಾಯ ಅಭಿವೃದ್ಧಿ ಇಲಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀವಾನ್ ಬಣಕಾರ್ ಅವರು ತಂದಿರತಕ್ಕಂಥ ಈ ನಿರ್ಣಯ ನೋಡವುದಕ್ಕೆ ಮತ್ತು ತಿಳಿಯುವುದಕ್ಕೆ ಬಹಳ ಚೆನ್ನಾಗಿದೆ. ಆದರೆ ಇದನ್ನು ನಾವು ಒಪ್ಪುವುದಾದರೆ ಈಗ ಇರತಕ್ಕಂಥ ಕಾನೂನು ಬದ್ಧವಾದಂಥ ಪಂಚಾಯಿತಿಗಳು ಮತ್ತು ಪಂಚಾಯಿತಿಗೆ ಸೇರಿದ ಉಪ-ಸಮಿತಿಗಳು, ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳು ಮತ್ತು ಅವುಗಳಿಗೆ ಸೇರಿದ ಉಪ-ಸಮಿತಿಗಳು, ಹಾಗೂ ಜಿಲ್ಲಾ ಅಭಿವೃದ್ಧಿ ಮಂಡಲಿಗಳ ಒಂದು ಕೆಲಸಕಾರ್ಯಗಳಿಗೆ ಈ ಒಂದು ಸಮಿತಿಯು ನೇಮಕದಿಂದ ಹೊಂದಾಣಿಕೆಯಾಗುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಆದಕ್ಕಾಗಿ ನಾನು ಮೊದಲೇ ಈ ಒಂದು ನಿರ್ಣಯವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾ, ಮಾನ್ಯ ಸದಸ್ಯರು ಇಲ್ಲಿಯವರೆಗೆ ಪ್ರಸ್ತಾಪ ಮಾಡಿರುವ ವಿಷಯಗಳ ಬಗ್ಗೆ ನಾನು ಉತ್ತರ ಕೊಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತೇನೆ.

ಕೆಲವು ಮಾನ್ಯ ಸದಸ್ಯರು ಪ್ರಜಾಪ್ರಭುತ್ವದ ವಿಚಾರದಲ್ಲಿ ಮತ್ತು ಪ್ರಜಾಪ್ರತಿನಿಧಿಗಳ ಒಂದು ಸ್ಥಾನಮಾನ ಮತ್ತು ಗೌರವದ ಬಗ್ಗೆ ಮಾತನಾಡುತ್ತಾ, ಇಂದು ಪ್ರಜಾಪ್ರತಿನಿಧಿಗಳು ದೂರದ ಗ್ರಾಮಾಂತರ ಪ್ರದೇಶಗಳಲ್ಲಿ ಅಧಿಕಾರಿಗಳ ಸಹಕಾರವನ್ನು ಪಡೆದು ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಸಾಧಿಸುವ ಬಗ್ಗೆ ಈಗಿರತಕ್ಕಂಥ ರೀತಿಯಲ್ಲಿ ಸಾಧ್ಯವಾದಷ್ಟು ಪ್ರೋತ್ಸಾಹವಿಲ್ಲವಾದ ಕಾರಣ ಇಂತಹ ಒಂದು ಸಮನ್ವಯ ಸಮಿತಿಯನ್ನು ರಚನೆ ಮಾಡಿದರೆ, ಅದರ ಮೂಲಕ ಸಾಕಷ್ಟು ಪ್ರಗತಿ ಸಾಧಿಸಬಹುದು, ಜನರ ತೊಂದರೆಗಳನ್ನು ನಿವಾರಣೆ ಮಾಡಬಹುದೆಂದು ತಿಳಿಸಿದರು. ಆದರೆ ಮಾನ್ಯ ಅನಿವಾಳ್ ನಂಜಪ್ಪನವರು ಮತ್ತು ಮಾನ್ಯ ಚಂದ್ರಶೇಖರ್ ಅವರು ಮಾತನಾಡುವಾಗ, ಏನು ಹೇಳಿದರೆಂದರೆ, ಇಂತಹ ಒಂದು ಸಮಿತಿಯನ್ನು ರಚನೆ ಮಾಡಿ, ಅದಕ್ಕೆ ಎಲ್ಲ ಖಾಸಗೀ ಮಹಾಶಯರನ್ನು, ಅಧಿಕಾರವರ್ಗದವರನ್ನು ಮತ್ತು ಪಂಚಾಯಿತಿಯ ಎಲ್ಲ ಸದಸ್ಯರನ್ನು ಸೇರಿಸಿದರೆ, ಅದು ಬಹಳ ಮಂದಿ ಸದಸ್ಯರಿರುವ ಸಮಿತಿಯಾಗುವುದರ ಬದಲು ಅದು ಒಂದು ಸಭೆಯಾಗುತ್ತದೆಯೆಂದು ಹೇಳಿದರು. ಇದು ನಿಜವಾಗಿಯೂ ಒಪ್ಪುವ ಮಾತು ಮಾನ್ಯ ಸದಸ್ಯರು ಮಾತನಾಡುವಾಗ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದರು. ಇಂದು ಅಧಿಕಾರಿಗಳ ಒಂದು ಅಡಳಿತವಾಗಿದೆ, ಖಾಸಗೀಯವರ ಮಾತೂ ಏನೂ ನಡೆಯುತ್ತಿಲ್ಲವೆಂದು ಹೇಳಿದರು. ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನರ ಒಂದು ಸಂಪರ್ಕವನ್ನು ಯಾರಾದರೂ ಹೆಚ್ಚಾಗಿ ಇಟ್ಟುಕೊಂಡಿರುತ್ತಾರೋ ಅಂತಹವರಿಗೆ ಜನತೆಯ ಸಮಸ್ಯೆಗಳು ಚೆನ್ನಾಗಿ ಗೊತ್ತಿರುತ್ತದೆಂದು ನನಗನ್ನಿಸುತ್ತದೆ. ನಾವು ನಿರೀಕ್ಷಿಸಿದ ರೀತಿಯಲ್ಲಿ ಪ್ರಗತಿಯನ್ನು ಏಕೆ ಸಾಧಿಸಲಿಲ್ಲ ಎಂಬ ಪ್ರಶ್ನೆಯನ್ನು ಹಾಕಿದರೆ ಅದಕ್ಕೆ ಉತ್ತರವನ್ನು ನಾವು ಸುಲಭವಾಗಿ ಕಂಡುಹಿಡಿಯಬಹುದು. ಇತ್ತೀಚಿನ ಜನಗಣತಿಯ ಪ್ರಕಾರ ಸರ್ವೇಸಾಮಾನ್ಯವಾಗಿ ಶೇಕಡಾ ೮೦ ರಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಮತ್ತು ಇವರ ಪೈಕಿ ಶೇಕಡಾ ೯೦ರಷ್ಟು ಮಂದಿ ಅವಿದ್ಯಾವಂತರಾಗಿದ್ದಾರೆ. ಇವರು ಆರ್ಥಿಕವಾಗಿ ಏನೂ ಮುಂದುವರೆದಿಲ್ಲ. ಜೊತೆಗೆ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಹ ಇವರು ಮುಂದುವರೆದಿಲ್ಲ ; ಇದರ ಒಂದು ಅರಿವು ಅವರಿಗೆ ಬರುವ ತನಕ ನಾವು ನಮ್ಮ ಒಂದು ಪ್ರಜಾಪ್ರಭುತ್ವ ಪದ್ಧತಿಯನ್ನು ಅಷ್ಟು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದೇವೆ ಎಂಬುದನ್ನು ಯಾರೂ ಒಪ್ಪತಕ್ಕದ್ದಲ್ಲ ; ಮತ್ತು ನಾನು ವೈಯುಕ್ತಿಕವಾಗಿ ಸಹ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ, Vigilance is the price of democracy ; ಅಂದರೆ ನೂರಕ್ಕೆ ನೂರರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರು ವಿದ್ಯಾವಂತರಾಗಿ ಆ ಮೂಲಕ ಜಾಗರೂಕರಾದರೆ ಮತ್ತು ಅವರಿಗೆ ಸಾಮಾಜಿಕ ನ್ಯಾಯದ ಅರಿವು ಅವರಿಗೆ ಬಂದರೆ ಆಗ ನಾವು ಪ್ರಜಾಪ್ರಭುತ್ವಪದ್ಧತಿಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಈಗ ಮತ್ತು ಈನೇ ಕಾಲಂ ಪ್ರಕಾರ ಕೆಲವು ಮೂಲಭೂತವಾದಂಥ ಹಕ್ಕುಗಳು ನಮ್ಮ ಸಂವಿಧಾನದಲ್ಲಿವೆ. ಅದರ ಪ್ರಕಾರ ರಾಷ್ಟ್ರದ ಹಾಗೂ ರಾಜ್ಯದ ಆರ್ಥಿಕ ಪುನರ್ವ್ಯವಸ್ಥೆಯಲ್ಲಿ ಖಾಯಂ ಆದಂಥ ಹುದ್ದೆ ತಮಗೆ ಇದೆ, ಮತ್ತು ಜೀವನ ಮಟ್ಟಕ್ಕೆ ತಕ್ಕಮಾನ ಪಡೆಯುವುದಕ್ಕೆ ಅವಕಾಶವಿದೆ ಎಂಬ ಅರಿವು ಗ್ರಾಮಾಂತರಪ್ರದೇಶದಲ್ಲಿರುವ ಎಲ್ಲ ಜನರಿಗೂ ಬಂದರೆ, ಆಗ ಅವರು ಮೇಲೆ ಬರುವುದಕ್ಕೆ ಅವಕಾಶವಾಗುತ್ತದೆ. ಆದರೆ ಈಗ ಇರತಕ್ಕಂಥ ಸಮಾಜ ರಚನೆಯಲ್ಲಿ ನಮ್ಮ ರಾಷ್ಟ್ರದಲ್ಲಿ ಏನಾಗಿದೆ ಎಂದರೆ, ಕೆಲವೇ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರೆದಿದ್ದಾರೆ, ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಹ ಕೆಲವೇ ವ್ಯಕ್ತಿಗಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಮುಂದೆ ಬಂದಿದ್ದಾರೆ. ನಮ್ಮ ಜನರ ಪೈಕಿ ಅವಿದ್ಯಾವಂತರೂ ಹೆಚ್ಚಾಗಿರುವ ಕಾರಣ ಮತ್ತು ಬಡವರು ಹೆಚ್ಚಾಗಿರುವ ಕಾರಣ, ಅವರಿಗೆ ಸಂವಿಧಾನದಲ್ಲಿರುವ ಹಕ್ಕುಗಳನ್ನು ದಕ್ಕಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ, ಇದೇ ಕಾರಣದಿಂದ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿಲ್ಲ, ಇದರ ಜೊತೆಗೆ ಸರ್ಕಾರದವರು ಒದಗಿಸಿಕೊಡುತ್ತಿರುವ ಸೌಲಭ್ಯಗಳು ಸಹ ಎಲ್ಲ ಜನರಿಗೂ ಮುಟ್ಟುತ್ತಿಲ್ಲ, ನಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಸರ್ಕಾರದವರು ಒದಗಿಸಿಕೊಡುತ್ತಿರುವ ಸೌಲಭ್ಯಗಳು ಎಲ್ಲರಿಗೂ ಮುಟ್ಟುವಂತೆ ಪ್ರಜಾಪ್ರತಿನಿಧಿಗಳಾದವರೂ ಸಹ

ನೋಡಿಕೊಳ್ಳಬೇಕಾಗುತ್ತದೆ. ಈಗ ಸರ್ಕಾರದವರು ಭೂಸುಧಾರಣ ಕಾನೂನನ್ನು ಜಾರಿಗೆ ತಂದಿದ್ದಾರೆ, ಇದರ ಅನುಕೂಲ ಎಲ್ಲರಿಗೂ ಸಿಗುವಂತೆ ನೋಡಿಕೊಳ್ಳುವ ಬಗ್ಗೆಯಾಗಲೀ, ನೀರಿನ ಸರಬರಾಜಿನ ಬಗ್ಗೆ ಯಾಗಲೀ, ಸೈಟ್‌ಗಳನ್ನು ಹಂಚುವ ವಿಚಾರದಲ್ಲಿಯೇ ಆಗಲಿ, ಮನೆಗಳನ್ನು ಕಟ್ಟಿಸಿಕೊಡುವ ವಿಚಾರ ದಲ್ಲಿಯೇ ಆಗಲೀ, ಅಂದರೆ minimum need-based programme, ಏನಿದೆ ಅದರ ಉಪಯೋಗ ಎಲ್ಲರಿಗೂ ಸಿಗುವಂತೆ ನೋಡಿಕೊಳ್ಳುವ ವಿಚಾರದಲ್ಲಿ ಮಾನ್ಯ ಹನುಮೇಗೌಡರಂತಹವರು ಮುಂದೆ ಬಂದು ಹೋರಾಟ ಮಾಡಿ ಅದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದೇ ರೀತಿ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದೀ ಪಕ್ಷದವರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮತ್ತು ಕೋಣಂದೂರು ಲಿಂಗಪ್ಪನವರು ಬಹಳ ಚೆನ್ನಾಗಿ ಸರ್ಕಾರದವರು ಜಾರಿಗೆ ತರುತ್ತಿರುವ ಕಾರ್ಯಕ್ರಮಗಳ ಉಪಯೋಗ ವನ್ನು ಪಡೆದುಕೊಳ್ಳುತ್ತಿದ್ದಾರೆ. ಇಲ್ಲಿ ಪಕ್ಷ ಪಂಗಡದ ಪ್ರಶ್ನೆ ಮುಖ್ಯವಲ್ಲ, ಮುಖ್ಯವಾಗಿ ಎಲ್ಲ ಜನರಿಗೂ ಅನುಕೂಲವಾಗಬೇಕು. ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ಇಲ್ಲಿ ಕೆಲವರು ಅಧಿಕಾರಿ ಗಳನ್ನು ದೂಷಣೆ ಮಾಡಿದರೂ ಸಹ ಅವರವರ ಕ್ಷೇತ್ರಗಳಲ್ಲಿ ಅಧಿಕಾರಿಗಳ ಸಹಾಯದಿಂದ ಒಳ್ಳೆಯ ಕೆಲಸ ಗಳನ್ನು ಮಾಡಿಸುತ್ತಿದ್ದಾರೆ. ಆ ರೀತಿ ಕೆಲಸ ಮಾಡದಿದ್ದರೆ ಮುಂದಿನ ಚುನಾವಣೆಯಲ್ಲಿ ಆರಿಸಿ ಬರುವು ದಾದರೂ ಹೇಗೆ ಎಂಬುದು ಅವರಿಗೂ ಗೊತ್ತಿದೆ. ಇದರ ಜೊತೆಗೆ ನಾನು ಮೊದಲೇ ಹೇಳಿದಂತೆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಎಲ್ಲ ಜನರಿಗೂ ರಾಜಕೀಯದ ಅರಿವು ಮತ್ತು ಸಾಮಾಜಿಕದ ಅರಿವು ಹೆಚ್ಚು ಹೆಚ್ಚಾಗಿ ಬರಬೇಕು. ಈಗಿನ ಒಂದು ಸನ್ನಿವೇಶದಲ್ಲಿ ಶಾಸಕರಾದವರು ಅಥವಾ ಮಂತ್ರಿಗಳಾದವರು ಕಾನೂನಿಗೆ ಮತ್ತು ನಿಯಮಗಳಿಗೆ ವಿರುದ್ಧವಾಗಿ ಏನಾದರು ನಡೆದು ಕೊಂಡರೆ ಅದು ಜನತೆಗೆ ಗೊತ್ತಾಗುತ್ತಿಲ್ಲ.

ಉಪಾಧ್ಯಕ್ಷರು.—Government of the people by the people ಆಗಿದೆ, ಆದರೆ for the people ಆಗಿದೆಯೇ ಎಂದು ಅವರು ಕೇಳುತ್ತಿದ್ದಾರೆ ?

SRI N. RACHAIAH.—It is of the people no doubt because they elect the people and by the people, it is no doubt, but upto 1971 it was not for the people. ಇಂದು ನಾವು ಗ್ರಾಮಾಂತರ ಪ್ರದೇಶಗಳನ್ನೇ ಉದಾಹರಣೆಗೆ ತೆಗೆದು ಕೊಂಡರೆ ..

ಶ್ರೀ ಕೆ ಎಚ್. ಹನುಮೇಗೌಡ.—೧೯೭೧ರವರೆಗೆ ಜನರಿಗಾಗಿ ಸರ್ಕಾರ ಇರಲಿಲ್ಲವೆಂದು ತಾವು ಹೇಳಿದಿರಿ, ಆ ಬಗ್ಗೆ ಸ್ವಲ್ಪ ವಿವರವಾಗಿ ಹೇಳಂತ್ತೀರಾ ?

ಶ್ರೀ ಎನ್. ರಾಚಯ್ಯ.—ಉದಾಹರಣೆಗೆ ಹೇಳುವುದಾದರೆ, ಹೌಸಿಂಗ್ ಬೋರ್ಡಿನವರು ೨೨ ರಿಂದ ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮನೆಗಳನ್ನು ಕಟ್ಟಿಸುತ್ತಿದ್ದರು, ಈ ಮನೆಗಳ ಒಂದು ಅನುಕೂಲ ನಿಮ್ನಂತಹವರಿಗೆ, ನಮ್ನಂತಹವರಿಗೆ, ವ್ಯಾಪಾರಸ್ಥರಿಗೆ ಭೂಮ್ಯಾಧಿಪತಿಗಳಿಗೆ, ಬಾಡಿವಾಳಷಾಹಿ ಗಳಿಗೆ ಮತ್ತು ಅವರುಗಳ ಸಂಬಂಧೀಕರಿಗೆ ಆಗುತ್ತಿತ್ತೇ ಹೊರತು ಬಡವರಿಗೆ ಅವರ ಅನುಕೂಲ ಸಿಗುತ್ತಿರ ಲಿಲ್ಲ. ಮತ್ತೆ ಕೆಲವರು ಆ ಮನೆಗಳನ್ನು ಪಡೆದುಕೊಂಡು ಬೇರೆಯವರಿಗೆ ಬಾಡಿಗೆ ಕೊಡುತ್ತಿದ್ದರು, ಆದರೆ ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಎರಡು ವರ್ಷಗಳಲ್ಲಿ ೩೪ ಸಾವಿರ ಮನೆಗಳನ್ನು ಕಟ್ಟಿಸಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆ ಜನತೆಯ ಒಂದು ಆಶೋತ್ತರ ಮತ್ತು ಒತ್ತಾಯದ ಮೇರೆಗೆ ಈ ಸಂಖ್ಯೆ ಇನ್ನೂ ಜಾಸ್ತಿಯಾಗಬಹುದು, ಇಂತಹ ಒಂದು ಅನುಕೂಲವನ್ನು ೧೯೭೧ನೇ ಇಸವಿಯವರೆಗೆ ಯಾವ ಮುಖ್ಯ ಮಂತ್ರಿಗಳು ಒದಗಿಸಿಕೊಟ್ಟಿದ್ದರು ಎಂದು ಕೇಳುತ್ತೇನೆ ?

ಶ್ರೀ ಕೆ. ಎಚ್. ಹನುಮೇಗೌಡ.—೧೯೭೧ನೇ ಇಸವಿಯವರೆಗೆ ಜನರಿಗಾಗಿ ಸರ್ಕಾರ ಇರಲಿಲ್ಲವೆಂದು ತಾವು ಹೇಳುವುದಾದರೆ, ಕೇಂದ್ರ ಸರ್ಕಾರ ಸಹ ಇದರಲ್ಲಿ ಸೇರುತ್ತದೆ ತಾನೆ ?

ಶ್ರೀ ಎನ್. ರಾಚಯ್ಯ.—ಕೇಂದ್ರ ಸರ್ಕಾರದಲ್ಲಿ ಪ್ರಪ್ರಥಮವಾಗಿ ಪ್ರಧಾನಮಂತ್ರಿಗಳಾದ ಪಂಡಿತ ಜವಹರ್‌ಲಾಲ್ ನೆಹರು ಅವರ ಕಾಲದಲ್ಲಿ ನಾನೂ ಸಹ ಲೋಕಸಭೆಯ ಸದಸ್ಯನಾಗಿದ್ದೆ. ಅವರು ಆ ಜಾಗಕ್ಕೆ ಬರಲು ಬೆಂಬಲ ಕೊಟ್ಟವರ ಪೈಕಿ ನಾನೂ ಸಹ ಒಬ್ಬ, ಆಗ ಅವರು ಏನು ಹೇಳುತ್ತಿದ್ದರು ಎಂಬುದು ನನಗೆ ಗೊತ್ತಿದೆ. I want to reform the entire society and reconstruct my nation ಎಂದು ಅವರು ಹೇಳುತ್ತಿದ್ದರು.

ಪಾರ್ಲಿಮೆಂಟರಿ ಪಕ್ಷದಲ್ಲಿ ನಮಗೆ ಆದೇಶ ಕೊಟ್ಟು ಕೊನೆಗೆ ಬಂದಂತ ಜನ ಯಾರು ಯಾರು ಹರಿಜನರಲ್ಲಿ ನಿಷ್ಠೆಯುಳ್ಳವರು ಎಂದರೆ ಶ್ರೀ ಬಸವಲಿಂಗಪ್ಪನವರು. ನಮ್ಮಂತವರು ಮತ್ತು ಎಲ್ಲಾ ವರ್ಗದಲ್ಲಿ ಶ್ರಿಮಂತ ವರ್ಗದವರೂ ಬಂದರು. ಭೂ ಸುಧಾರಣೆ ಕಾನೂನು ಹೇಗೆ ಮಾಡುತ್ತಿದ್ದೀವೆ ಎಂದರೆ ೨೭ ವರ್ಷ ಆದಮೇಲೆ ಈವತ್ತಿಗೂ ಕೂಡ ಅದರ ಮೇಲೆ ಇಷ್ಟೊಂದು ವಿರೋಧ ಇರಬೇಕಾದರೆ, ಆಗ ಎಷ್ಟು ಇತ್ತು ನೋಡಿ. ಬಂದಂತ ಪ್ರತಿನಿದಿಗಳು ಯಾರು ಎಂದರೆ ಪಟ್ಟಭದ್ರ ಹಿತಾಸಕ್ತಿಗಳು, ಭೂಸ್ವಾಮಿಗಳು, ಬಂಡವಾಳಶಾಹಿಗಳ ಪ್ರತಿನಿಧಿಗಳು, ಬುದ್ಧಿವಂತರನ್ನು ಒಳಗೊಂಡು ಬಂದರು. ಶೋಷಿತ ಜನತೆಯನ್ನು ಉಪಯೋಗಿಸಿಕೊಂಡು ಅವರ ನಂಬಿಕೆಯನ್ನು ಉಪಯೋಗಿಸಿಕೊಂಡು ನಮ್ಮ ನಿಮ್ಮ ವರ್ಗದವರ ಬಡವರ ಮೇಲೆ ಹೋರಾಟ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಆ ಸಂದರ್ಭದಲ್ಲಿ ಪ್ರಧಾನ ಮಂತ್ರಿಯವರು ಅದಕ್ಕೆ ಅವಕಾಶ ಕೊಡಲಿಲ್ಲ. ಆದ್ದರಿಂದ ಎರಡು ಪಂಗಡಗಳಾಗಿ ಕವಲೊಡೆಯಿತು. ಒಂದು ಶ್ರೀಮಂತರ ಪರವಾಗಿ ಹೋರಾಟ ಮಾಡಲು ನಿಂತುಕೊಂಡಿತು, ಇನ್ನೊಂದು ಪಂಗಡ ಬಡವರ ಕಡೆ ಹೋರಾಟ ಮಾಡಲು ನಿಂತುಕೊಂಡಿತು. ಆದರೂ ಬಡವರಿಗೆ ಕೊಟ್ಟ ಭರವಸೆಗಳು ಈಡೇರಲಿಲ್ಲ. ಶ್ರೀಕಾಗೋಡು ತಿಮ್ಮಪ್ಪನವರು ಅಲ್ಲಿ ಇದ್ದಂತೆ ನಮ್ಮ ಪಕ್ಷಕ್ಕೆ ಬಂದರೆ ಇನ್ನೂ ಚೆನ್ನಾಗಿ ಕೆಲಸ ಮಾಡ ಬಹುದು.

5-00 P.M.

ಶ್ರೀ ಕೋಣಂದೂರು ಲಿಂಗಪ್ಪ:—ಹೋಗಿರುವವರು ನೀವು ಏನು ಮಾಡುತ್ತಿದ್ದೀರೆಂಬುದು ಗೊತ್ತಾಗುತ್ತಿದೆ.

ಶ್ರೀ ಎನ್. ರಾಚಯ್ಯ.—ನಾವು ಮಾಡುತ್ತಿರುವ ಕೆಲಸ ನೋಡುತ್ತಿದ್ದೀರಿ, ಮೆಚ್ಚಿಗೆಯಾಗಿದೆ ಎಂದು ತಾವೇ ಹೇಳುತ್ತೀರಿ. ಏನು ಇಲ್ಲ ಎಂದಲ್ಲ. ಪ್ರಜಾಪ್ರಭುತ್ವದಲ್ಲಿ ಇಷ್ಟೊಂದು ಅಡಚಣೆ ಇರಬೇಕಾದರೆ ಎಲ್ಲರನ್ನು ಮೆಚ್ಚಿಸಿ ಕೆಲಸ ಮಾಡುವುದಕ್ಕೆ ಎಷ್ಟರ ಮಟ್ಟಿಗೆ ಸಾಧ್ಯವೆನ್ನುವುದನ್ನು ತಿಳಿದು ಹೇಳುತ್ತಿದ್ದೇನೆ. ನಮ್ಮವರೆ ಹೆಚ್ಚಿಗೆ ಬಂದರೆ ಒಳ್ಳೆಯ ಕೆಲಸಗಳನ್ನು ಮಾಡಲು ಸುಲಭವೆಂದು ನಾನು ಹೇಳುತ್ತೇನೆ.

ಹೌಸಿಂಗ್ ತೆಗೆದುಕೊಂಡಾಗ ಮೊದಲು ಯಾರು ಶ್ರೀಮಂತರಿರುತ್ತಾರೆ, ಅವರಿಗೆ ಮನೆಗಳನ್ನು ಕೊಡುತ್ತಿದ್ದರು. ೧೯೭೧ನೇ ಇಸವಿಯಿಂದ ಈಜೆಗೆ ಲಕ್ಷಾನುಗಟ್ಟಲೆ ಬೇರೆ ಬೇರೆ ರಾಜ್ಯಗಳಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳ ಯೋಜನೆ ಏನು ಇದೆಯೋ ಅದರ ಉಪಯೋಗ ತೆಗೆದುಕೊಂಡರು ಅದರಿಂದ ಎಷ್ಟು ಸಾಮಾಜಿಕವಾಗಿ, ರಾಜಕೀಯವಾಗಿ ಸಂಘಟನೆಯ ವಾತಾವರಣ ನಮ್ಮ ರಾಷ್ಟ್ರದಲ್ಲಿ ಸೃಷ್ಟಿಯಾಗಿದೆ ಎನ್ನುವಂತಕ್ಕಂಥದನ್ನು ಸಂಬಂಧಪಟ್ಟ ಸಚಿವನಾಗಿ ನನಗೆ ಅರಿವು ಆಗಿದೆ. ಶ್ರೀ ಕೋಣಂದೂರು ಲಿಂಗಪ್ಪನವರು ಪ್ರಶ್ನೆಗೆ ಉತ್ತರ ಕೇಳಬೇಕು, ಈಗ ಉದಾಹರಣೆಗಾಗಿ ಸಮನ್ವಯ ಸಮಿತಿಯ ಉಪಯೋಗ ಆಗತ್ಯವಿಲ್ಲ. ಏತಕ್ಕೋಸ್ಕರವಾಗಿ ಎಂದರೆ ಹೇಳುತ್ತೇನೆ. ಪ್ರಜಾಪ್ರಭುತ್ವ ಎನ್ನುವ ಪದವನ್ನು ಉಯೋಗಿಸಿಕೊಂಡು ಮೂವತ್ತು ಭಾಗ ಜನಗಳ ಪೈಕಿ ಎಲ್ಲ ವರ್ಗದಲ್ಲೂ ಬಹಳ ಬುದ್ಧಿವಂತಾಗಿರುವ ಜನ ಯಾವಾಗಲೂ ಅವರ ಪರವಾಗಿ ಮಾತನಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳ ಪಾತ್ರ ಬಹಳ ಮುಖ್ಯವಾದುದು. ಅಧಿಕಾರಿಗಳಿಗೆ ರಾಜ್ಯಾಂಗದತ್ತವಾಗಿ ರಕ್ಷಣೆ ಕೊಟ್ಟು ಅವರಿಗೆ ನ್ಯಾಯ ದೊರಕಿಸಿ ಅವರು ಶ್ರದ್ಧೆಯಿಂದ ಕೆಲಸಮಾಡಲು, ನಿರ್ಧಿಷ್ಟವಾದ ಕೆಲಸ ನೇಮಿಸಿ ಕಾನೂನು, ಕಾಯಿದೆಗೆ ಅನುಗುಣವಾಗಿ ಕೆಲಸಮಾಡುವಂತೆ ಮಾಡಬೇಕು. ಅವರಿಗೆ ವಹಿಸಿರುವ ಖಾತೆಗಳನ್ನು ಕರ್ತವ್ಯ ದೃಷ್ಟಿಯಿಂದ ಮಾಡಲೇಬೇಕು. ಕಾರ್ಯಕ್ರಮ ಮತ್ತು ಯೋಜನೆಗಳನ್ನು ಹಾಕಿಕೊಂಡು ಅದರ ಒಂದು ಉದ್ದೇಶವನ್ನು ಮತ್ತು ಅದರ ಒಂದು ಪೂರ್ಣ ಪ್ರಗತಿಯನ್ನು ಸಾಧಿಸಲೇ ಬೇಕು. ಹಾಗೆ ಸಾಧಿಸದೆ ಇದ್ದಪಕ್ಷದಲ್ಲಿ ನಿರ್ಧಾರವಾದ, ಕಾನೂನುಬದ್ಧವಾದ ಕ್ರಮ ಅವರ ಮೇಲೆ ಕೈಗೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿದ ಪಕ್ಷದಲ್ಲಿ ಅಧಿಕಾರಿಗಳನ್ನು ಅಕ್ಷೇಪಣೆ ಮಾಡತಕ್ಕದ್ದು ಅವರ ವಿಚಾರಗಳನ್ನು ಹೆಚ್ಚಾಗಿ ಪ್ರಸ್ತಾಪ ಮಾಡತಕ್ಕದ್ದು ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಅದು ಯಾವಾಗ ಬರಬೇಕೊ ಆಗ ಸಚಿವನೇ ಆಗಿರಲಿ, ಶಾಸಕರೇ ಆಗಿರಲಿ ಎಲ್ಲ ಜನರು ಯೋಚನೆ ಮಾಡಬೇಕು. ಯಾರೋ ಒಬ್ಬ ಅಧಿಕಾರಿಯನ್ನು ಸಸ್‌ಪೆಂಡ್ ಮಾಡಿದರೆ ನೀವೆಲ್ಲ ಹೋರಾಟ ಮಾಡುತ್ತೀರಿ ಸಸ್‌ಪೆಂಡ್ ಮಾಡಿದ ತಕ್ಷಣ ಇನ್ನೊಂದು ಗುಂಪಿನ ಜನ ಬರುತ್ತಾರೆ. ಪಾರ್ಲಿಮೆಂಟ್ ಸದಸ್ಯರು, ಶಾಸನ ಸಭೆಯ ಸದಸ್ಯರು, ಗುಂಪು ಗುಂಪಾಗಿ ಬರುತ್ತಾರೆ. ಆಯಾ ಪಕ್ಷದ ಸದಸ್ಯರು ಬರುತ್ತಾರೆ. ರಕ್ಷಣೆ ಕೊಡುವ ಮನವಿಗಳನ್ನು ತರುತ್ತಾರೆ. ಹೀಗೆ ಇದ್ದರೆ ಇದನ್ನು ಹೇಗೆ ಸರಿಪಡಿಸುವುದು ? ಇದನ್ನೆ ಮತ್ತೆ ಜ್ಞಾಪಕ ಪಡಿಸುತ್ತೇನೆ. ಇದು ಜನತೆಯಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಸಂಪೂರ್ಣವಾಗಿ ಹೋಗಬೇಕು

ಕಪ್ಪಕಾಣಿಕೆಯನ್ನು ಸರ್ಕಾರಕ್ಕೆ ತಂದು ಕೊಡಲಿಕ್ಕೆ, ಶ್ರೀ ಹನುಮೇಗೌಡರು, ಶ್ರೀ ಕಾಗೋಡು ತಿಮ್ಮಪ್ಪ ನವರು, ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು, ಹೀಗೆ ವಿರೋಧಪಕ್ಷದ ನಾಯಕರು ಒಪ್ಪುವಂತ ರೀತಿ ಯಲ್ಲಿ ಅಧಿಕಾರಗಳನ್ನು ಕೊಡಬೇಕು. ಅಧ್ಯಕ್ಷರೆ ಅಧಿಕಾರಿಗಳು ಕಾನೂನುಬದ್ಧವಾಗಿ, ರಾಜ್ಯಾಂಗಬದ್ಧ ವಾಗಿ, ನಿಯಮಿಸಿ, ಯೋಜನೆಗಳ ಕಾರ್ಯಕ್ರಮಗಳನ್ನು ಸರ್ಕಾರದವರು ಈಡೇರಿಸತಕ್ಕ ರೀತಿಯಲ್ಲಿ ಜಾರಿಗೆ ಕೊಟ್ಟು ಜಗತ್ತಿನ ಪ್ರಗತಿಯನ್ನು ಸರ್ವಕ್ಷೇತ್ರದಲ್ಲೂ ಸಾಧಿಸಬೇಕು ಎನ್ನುವುದು ನನ್ನ ಮನಸ್ಸಿನಲ್ಲಿ ಇರತಕ್ಕದ್ದು. ಅದನ್ನು ಈಗಲೂ ಒಪ್ಪಿಕೊಳ್ಳುತ್ತೇನೆ. ಸಚಿವನಾಗಿ ಕೆಲವು ಅಧಿಕಾರಿಗಳನ್ನು ವರ್ಗ ಮಾಡಬೇಕಾದರೆ ಪ್ರತಿಯೊಬ್ಬ ಸದಸ್ಯರು ಬರೆದು ಬರೆದು ಕಳುಹಿಸುತ್ತಾರೆ. ಅದನ್ನೆಲ್ಲ ಇಟ್ಟು ಕೊಂಡಿದ್ದೇನೆ. ಒಬ್ಬರು ಒಂದು ವಿಧವಾಗಿ ಬರೆದರೆ ಇನ್ನೊಬ್ಬರು ಇನ್ನೊಂದು ವಿಧವಾಗಿ ಬರೆಯುತ್ತಾರೆ. ವಾರನೆಯವರು ಬೇರೆ ತರಹ ಬರೆಯುತ್ತಾರೆ. ಸರ್ಕಾರದ ಮಂದೆ ನಾಳೆ ದಿವಸ ಒಂದರೆ ಏನು ಹೇಳುವುದಕ್ಕೆ ಆಗುವುದಿಲ್ಲ. ನನ್ನ ಜೀವಮಾನದಲ್ಲಿ ಪಾರ್ಲಿಮೆಂಟರಿ ವಿಧಾನ ಸಭೆಯ ಸದಸ್ಯನಾಗಿ ಹಾಗೆ ಮಾಡುವುದಿಲ್ಲ. ಮಾಡಿದರೂ ಬಿಡುವುದಿಲ್ಲ. ಸಂಬಂಧಪಟ್ಟ ಆಫೀಸರಿಗೆ ಚೀಪ್ ಮಿನಿಸ್ಟರಿಗೆ ಬರೆದು ಅತನನ್ನು ಡಿಸ್‌ಮಿಸ್ ಮಾಡಬೇಕಾಗುತ್ತದೆ. ಅಂಥ ಅಧಿಕಾರಿಗಳ ವಿವರವು ಕೂಡ ಇದೆ. ಪ್ರಾಮಾಣಿಕತನದಿಂದ ಜನತೆಯ ಮನಸ್ಸಿಗೆ ಬೆಲೆ ಕೊಟ್ಟುಕೊಂಡು ಆಡಳಿತದಲ್ಲಿ ಸಾಮಾಜಿಕ, ನ್ಯಾಯ, ಧರ್ಮ ಜನತೆಗೆ ದೊರಕಿಸುವುದಿದ್ದರೆ ಅಂಥ ಅಧಿಕಾರಿಗಳನು ಆಕ್ಷೇಪಣೆ ಮಾಡತಕ್ಕ ಪ್ರಶ್ನೆಯೇ ಬರುವುದಿಲ್ಲವೆಂದು ನನ್ನ ಖಚಿತವಾದ ಅಭಿಪ್ರಾಯವಾಗಿದೆ. ಯಾವುದೇ ಪಕ್ಷದವರು ಕರೆಯಲಿ, ಚುನಾವಣೆ ಬಂದಪಕ್ಷದಲ್ಲಿ ಸರ್ಕಾರಿ ಕಾರ್ಯಕ್ರಮಗಳ ಬಗ್ಗೆ ಭರವಸೆ ಗಳನ್ನು ಕೊಟ್ಟಿದ್ದಾರೆ. ಹಾಗೆ ಅವರು ಸ್ವಂತ ಭರವಸೆಗಳನ್ನು ಕೊಡುವ ಪ್ರಶ್ನೆ ಬರುವುದಿಲ್ಲ. ಯಾವ ಒಂದು ಕಾರ್ಯಕ್ರಮ, ಪ್ರಣಾಳಿಕೆಯ ಸೂತ್ರದ ಮೇಲೆ ಯಾವ ಒಂದು ಪಕ್ಷಕ್ಕೆ ಜನತೆ ಓಟು ಪಡೆದು ಆಡಳಿತ ಪಕ್ಷ ಬಂದಮೇಲೆ, ಸಮಾಜದ ಎಲ್ಲ ತರಹದ ಪ್ರಗತಿಯನ್ನು ಧೋರಣೆಗಳನ್ನು ಸಾಧಿಸುವೇಕಾಗು ತ್ತದೆ. ಆಡಳಿತ ಪಕ್ಷದವರು ಪ್ರಣಾಳಿಕೆಯ ಪ್ರಕಾರ ಏನು ಒಂದು ಕಾರ್ಯಕ್ರಮ ಇಡುತ್ತಾರೆ ಅದನ್ನು ಬೇರೆ ಪಕ್ಷದವರು ಉಪಯೋಗಿಸಿಕೊಂಡಿರತಕ್ಕ ಸಂದರ್ಭವೂ ಇದೆ. ಯಾರು ಅಧಿಕಾರಿಗಳು ಶಾಸಕರು ಮತ್ತು ಮಂತ್ರಿಗಳು ನಿಯಮಕ್ಕೆ ಮೀರಿ ನಡೆಯುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರ ಮಾಡೋಣ. ಶ್ರೀಮಾನ್ ಕೋಣಂದೂರು ಲಿಂಗಪ್ಪನವರಿಗೆ ಎರಡು ವಿಚಾರಗಳನ್ನು ಹೇಳಿ ನನ್ನ ಉತ್ತರವನ್ನು ಮಂಗಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಸಮನ್ವಯ ಸಮಿತಿಯ ಅಗತ್ಯವಿಲ್ಲ. ಅವುಗಳನ್ನು ಸ್ಥಾಪನೆ ಮಾಡಿದರೆ ಅನಾವಶ್ಯಕವಾಗಿ ಕಾಲಕಳೆಯುವುದಲ್ಲದೆ ಟಿ ಎ, ಡಿ.ಎ. ಗಳನ್ನು ಖರ್ಚುಮಾಡುವುದಕ್ಕೆ ಅವಕಾಶವಾಗುತ್ತದೆ. ಪಂಚಾಯತಿಗಳು, ತಾಲ್ಲೂಕ್ ಬೋರ್ಡ್‌ಗಳು, ಜಿಲ್ಲಾ ಮಂಡಳಿಗಳು, ಸಂಪೂರ್ಣವಾಗಿ ಆಟಾನಮಸ್. ಅದಕ್ಕೆ ಅನುಗುಣವಾಗಿ ನಿಯಮಾವಳಿಗಳನ್ನು ಮಾಡಿ ಪ್ರತಿಯೊಂದು ಪಂಚಾಯತಿಯಲ್ಲೂ, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಮಿಟಿ, ಅಗ್ರಿಕಲ್ಚರಲ್ ಡೆವಲಪ್‌ಮೆಂಟ್ ಕಮಿಟಿ, ಹೆಲ್ತ್ ಕಮಿಟಿ, ಅನಿಮಲ್ ಹಸ್‌ಬೆಂಡರಿ ಕಮಿಟಿ ಇವೇ ಮುಂತಾದ ಕಮಿಟಿಗಳನ್ನು ಮಾಡುವುದರ ಜೊತೆಗೆ ಹರಿಜನಗಿರಿಜನರ ಒಂದು ಅಭ್ಯುದಯಕ್ಕೆ ನಾವು ಕಾನೂನು ಬದ್ಧವಾಗಿ ಒಂದು ವ್ಯವಸ್ಥೆ ಮಾಡಿರುವ ಕಾರಣ ಎಲ್ಲ ವರ್ಗದ ಜನರಿಗೂ ವಿಶೇಷ ರಕ್ಷಣೆಯನ್ನು ಕೊಡುವುದರ ಮೂಲಕ ಪ್ರಗತಿ ಯನ್ನು ಸಾಧಿಸುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಒಂದು ಕಡೆ ಜನತೆಯಲ್ಲಿ ಜಾಗೃತಿ ಉಂಟಾಗು ವುದಲ್ಲದೆ ಇನ್ನೊಂದು ಕಡೆ ನಾವು ಅಧಿಕಾರಿಗಳನ್ನು ಕಾನೂನುಬದ್ಧವಾಗಿ ಹಿಡಿತದಲ್ಲೂ ಇಟ್ಟುಕೊಳ್ಳ ಬಹುದು.

ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ಯಾರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅವರಿಗೆ ಪ್ರೋತ್ಸಾಹ ಕೊಡಬೇಕು. ಯಾರು ಅಧಿಕಾರವನ್ನು ದುರುಪಯೋಗ ಮಾಡುತ್ತಾರೆ. ಜನತೆಗೆ ದ್ರೋಹ ಮಾಡುತ್ತಾರೆ ಅಂಥವರನ್ನು ಪತ್ತೆ ಹಚ್ಚಿ ಕಾನೂನು ಪ್ರಕಾರವಾಗಿ ಯಾರು ಯಾರಿಗೆ ಯಾವ ಯಾವ ರೀತಿಯ ಶಿಕ್ಷೆಯನ್ನು ಮಾಡಬೇಕೋ ಅದನ್ನು ಮಾಡಬೇಕು. ಒಬ್ಬ ೨ ಮೂಟೆ ಸಿಮೆಂಟ್ ತೆಗೆದು ಕೊಂಡರೆ ಅವನನ್ನು ಡಿಸ್‌ಮಿಸ್ ಮಾಡುವುದು, ಇನ್ನೊಬ್ಬ ೩ ಸಾವಿರ ಮೂಟೆ ಸಿಮೆಂಟ್ ತೆಗೆದುಕೊಂಡು ಹೋದರೆ ಅತನನ್ನು ಬಿಟ್ಟುಬಿಡುವುದು ಇದು ಯಾವ ನ್ಯಾಯ ? ಅಧಿಕಾರಿಗಳೇ ಇರಲಿ, ಮಂತ್ರಿಗಳೇ ಇರಲಿ, ಯಾರೇ ಇರಲಿ ಅದರಲ್ಲಿ ನಾವೂ. ನೀವು, ಎಂದು ನೋಡತಕ್ಕದ್ದು ಅಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಹನುಮೇಗೌಡರು ಹೇಳತಕ್ಕಂಥಾದ್ದು, ಅವರು ಮಾಡತಕ್ಕಂಥಾದ್ದು ಸರಿ ಎಂದು ನನಗನಿಸುತ್ತದೆ. ಒಂದೊಂದು ಸಾರಿ ಉಗ್ರವಾಗಿ ಮಾನ್ಯ, ಬಂಗಾರಪ್ಪನವರು ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಕೋಣಂದೂರು ಲಿಂಗಪ್ಪನವರು ಹಾಗೆ ಮಾಡುತ್ತಾರೆ ಅಷ್ಟೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ವಿರೋಧ ಪಕ್ಷದವರನ್ನು ಒಳ್ಳೆಯವರನ್ನಾಗಿ ಮಾಡಿಕೊಳ್ಳುವುದಕ್ಕೆ ಹೊರಟಿದ್ದೀರಾ ?

ಶ್ರೀ ಎನ್. ರಾಚಯ್ಯ.—ನಾವೂ, ನೀವೂ ಯಾವಾಗಲೂ ಕೂಡ ಒಂದೇ ಆದಂದರಿಂದ ನಾನು ಹೇಳುವುದೇನೆಂದರೆ ನನಗೆ ವೈಯಕ್ತಿಕವಾಗಿ ಯಾವ ಸದಸ್ಯರ ಮೇಲಾಗಲಿ, ಅಥವಾ ಯಾವ ಪಕ್ಷದ ಮೇಲಾಗಲಿ ನನಗೆ ಯಾವುದೇ ವಿಧವಾದ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಈಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಇರುವ ಹಾಗೆ ಎಲ್ಲಾ ಇಲಾಖೆಗೂ ಸಂಬಂಧಪಟ್ಟಹಾಗೆ ಸಮನ್ವಯ ಸಮಿತಿಗಳನ್ನು ಮಾಡಿದರೆ ಅವರಿಗೆ ಏನೇನು ತೊಂದರೆ ಇದೆ. ಎಷ್ಟು ದುಡ್ಡು ಬಂತು, ಎಷ್ಟು ದುಡ್ಡು ಖರ್ಚಾಯಿತು ಎನ್ನುವುದನ್ನು ವೆರಿಫೈ ಮಾಡುತ್ತಾರೆ. ಏನಾದರೂ ಬಿಟ್ಟು ಹೋಗಿದ್ದರೆ ಅದನ್ನು ಕೇಳುವವರು ಇದ್ದಾರೆ ಎನ್ನುವ ಭೀತಿಯಿಂದ ಒಂದಿಷ್ಟು ಕೆಲಸವಾದರೂ ಅಲ್ಲಿ ನಡೆಯುತ್ತದೆ ಈ ದೃಷ್ಟಿಯಿಂದ ತಾಲ್ಲೂಕು ಸಮನ್ವಯ ಸಮಿತಿಯನ್ನು ಮಾಡುವುದರಿಂದ ಪ್ರಜಾಪ್ರಭುತ್ವಕ್ಕೆ ವಿರೋಧವಾಗುವುದಿಲ್ಲ. ಅದಕ್ಕೆ ಪ್ರೇರಕವಾಗುತ್ತದೆ. ಈ ದೃಷ್ಟಿಯಿಂದ ನೋಡಿ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲನ್ನು ಉದಾಹರಣೆಯಾಗಿ ತೆಗೆದುಕೊಂಡರೆ ಇಡೀ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲಸವಾಗುತ್ತದೆ. ತಾಲ್ಲೂಕು ಸಮನ್ವಯ ಸಮಿತಿ ಮಾಡುವುದರಿಂದ ಆ ತಾಲ್ಲೂಕಿಗೆ ಉತ್ತಮ ಕೆಲಸವಾಗುತ್ತದೆ. ಇದರಲ್ಲಿ ಸದಸ್ಯರ ಟಿ.ಎ., ಡಿ.ಎ ಗೆ ದುಡ್ಡು ಖರ್ಚಾಗುತ್ತದೆ ಎನ್ನುವ ಅಭಿಪ್ರಾಯ ತಮಗೆ ಇದ್ದರೆ, ಅವರಿಗೆ ಟಿ.ಎ., ಡಿ.ಎ. ಕೊಡುವುದು ಬೇಡ. ಎರಡೂ–ಮೂರು ತಿಂಗಳಿಗೆ ಒಂದುಸಾರಿ ಮೀಟಿಂಗ್ ಕರೆಸಿ. ಒಟ್ಟಿನಲ್ಲಿ ಹೇಳುವುದಾದರೆ ಮಾನ್ಯ ಬಣಕಾರ್‌ರವರು ತಂದಿರುವ ನಿರ್ಣಯ ಬಹಳ ಪ್ರಾಮುಖ್ಯವಾದುದು. ಹಿಂದುಳಿದ ಪ್ರದೇಶದ ಬಗ್ಗೆ, ಪ್ರಜಾಪ್ರಭುತ್ವದ ಬಗ್ಗೆ ತಮಗೆ ಅಷ್ಟು ಅನುಕಂಪ ಇದ್ದರೆ ತಾವು ಇದಕ್ಕೆ ಚಕಾರ ಶಬ್ದವನ್ನೂ ಕೂಡ ಎತ್ತದೆ ಒಪ್ಪಿಕೊಳ್ಳಬೇಕು.

ಶ್ರೀ ಎನ್. ರಾಚಯ್ಯ.—ಇನ್ನೂ ಸಮಿತಿಗಳನ್ನು ಮಾಡಿಲ್ಲ. ಅಗತ್ಯ ಬಿದ್ದ ಪಕ್ಷದಲ್ಲಿ ಮಾಡತಕ್ಕ ದ್ದಾರಲ್ಲಿ ನನ್ನ ಅಭ್ಯಂತರ ಇಲ್ಲ ಈಗ ಇರತಕ್ಕಂಥ ಪಂಚಾಯಿತಿಗಳನ್ನು ತಾಲ್ಲೂಕು ಬೋರ್ಡ್‌ಗಳನ್ನೂ ಜನತೆ ಒಪ್ಪುವ ರೀತಿಯಲ್ಲಿ ನಾವೂ, ತಾವೂ ಎಲ್ಲರೂ ಒಪ್ಪುವ ರೀತಿಯಲ್ಲಿ ಪುನರ್ ವ್ಯವಸ್ಥೆ ಮಾಡಿ, ನೀವು, ನಾವು, ಪಕ್ಷ ಪ್ರತಿಪಕ್ಷ ಇಲ್ಲದೆ ಅಧಿಕಾರಿಗಳ ಸಹಕಾರ ತೆಗೆದುಕೊಂಡು ಯೋಜನೆಗಳನ್ನು ಜಾರಿಗೆ ಕೊಟ್ಟರೆ ನಾವು ನಿರೀಕ್ಷೆ ಮಾಡಿದ ಪ್ರಗತಿಯನ್ನು ಸಾಧಿಸಬಹುದು. ಈ ವಿಚಾರದಲ್ಲಿ ನನ್ನ ಭಿನ್ನಾಭಿಪ್ರಾಯ ಇಲ್ಲ ಇಷ್ಟು ಹೇಳಿ ಮಾನ್ಯ ಬಣಕಾರ್‌ರವರು ತಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ. ಜಿ. ಬಣಕಾರ್.—ಸನ್ಮಾನ್ಯ ಅಧ್ಯಕ್ಷರೆ, ಇದು ಪ್ರಜಾಪ್ರಭುತ್ವ. ಈ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಪ್ರತಿಯೊಂದು ತಾಲ್ಲೂಕಿನಲ್ಲೂ ಆಗುವಂತಹ ಕೆಲಸಕಾರ್ಯಗಳನ್ನು ಅವು ಯಾವರೀತಿ ಆಗುತ್ತವೆ ಎಂಬುದನ್ನು ನೋಡತಕ್ಕದ್ದು ನಮ್ಮ ಕರ್ತವ್ಯ. ಮತ್ತು ಸರ್ಕಾರದ ಯೋಜನೆಗಳು ಸಫಲವಾಗುವುದನ್ನು ನಿರೀಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಈ ದಿಸೆಯಲ್ಲಿ ಸಮನ್ವಯ ಸಮಿತಿಯನ್ನು ಮಾಡುವುದು ಯೋಗ್ಯವೆಂದು ಸರ್ಕಾರಕ್ಕೆ ಸಲಹೆ ಕೊಟ್ಟಿದೆ. ಆದರೆ ತಾವು ಇದನ್ನು ವಾಪಸ್ಸು ತೆಗೆದುಕೊಳ್ಳಿ ಸೂಕ್ತ ನಿಯಮಾವಳಿಗಳನ್ನು ಮಾಡುತ್ತೇವೆ ಎಂದು ಹೇಳಿದಮೇಲೆ ಇದನ್ನು ನಾನು ವಾಪಸು ತೆಗೆದುಕೊಳ್ಳುತ್ತೇನೆ.

MR. DEPUTY SPEAKER.—There is no scope for conditional withdrawal. Even then I will have to seek the permission of the House for the withdrawal. Is it the pleasure of the House that the resolution be withdrawn ?

SOME HON. MEMBERS.—No, no.

MR. DEPUTY SPEAKER.—I will put the resolution to the vote of the House. The question is :

"ಅಭಿವೃದ್ಧಿ ಕಾಮಗಾರಿಗಳನ್ನು ಕೈಕೊಂಡು ಅವುಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತ ಗೊಳಿಸಲು, ಸಾರ್ವಜನಿಕರ ಬೇಡಿಕೆ ಹಾಗೂ ಕುಂದುಕೊರತೆಗಳ ಬಗ್ಗೆ ಅವಶ್ಯಕ ಪರಿಹಾರ ಒದಗಿಸಲು ಹಾಗೂ ಸರ್ಕಾರದವರ ನೀತಿ ಹಾಗೂ ಕಾರ್ಯಕ್ರಮಗಳನ್ನು ಸುಗಮವಾಗಿ ಜಾರಿಗೊಳಿಸಲು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸ್ಥಳೀಯ ಶಾಸಕರು ಅಧ್ಯಕ್ಷರಾಗಿರುವ ಹಾಗೂ ತಾಲ್ಲೂಕಿನ ತಹಸೀಲ್ದಾರರು

ಸಂಚಾಲಕರಾಗಿರುವ ತಾಲ್ಲೂಕು ಸಮನ್ವಯ ಸಮಿತಿಯೊಂದನ್ನು ರಚಿಸಬೇಕೆಂದು ಸದರಿ ಸಮಿತಿಯಲ್ಲಿ ಕೆಳಕಂಡ ಸದಸ್ಯರಿರಬೇಕೆಂದೂ ಈ ಸಭೆಯವರು ಅಭಿಪ್ರಾಯಪಡುತ್ತಾರೆ :—

೧.	ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು	...	ಸದಸ್ಯರು
೨.	ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರೀ ಸಂಘದ ಅಧ್ಯಕ್ಷರು	...	,,
೩.	ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು	...	,,
೪.	ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಂಘದ ಅಧ್ಯಕ್ಷರು	...	,,
೫.	ತಾಲ್ಲೂಕು ಹರಿಜನ-ಗಿರಿಜನ ಗೃಹನಿರ್ಮಾಣ ಸಹಕಾರೀ ಸಂಘದ ಅಧ್ಯಕ್ಷರು	...	,,
೬.	ಗ್ರಾಮಪಂಚಾಯತಿಗಳ ಅಧ್ಯಕ್ಷರುಗಳು	...	,,
೭.	ತಾಲ್ಲೂಕು ಕೇಂದ್ರ ಸಹಕಾರಿ ಬ್ಯಾಂಕಿನ ಅಧಿಕಾರಿಗಳು	...	,,
೮.	ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರವರು	...	,,
೯.	ಕರ್ನಾಟಕ ರಾಜ್ಯದ ಪಿದ್ಯುಚ್ಛಕ್ತಿ ಮಂಡಲಿಯ ಸಹಾಯಕ ಇಂಜನಿಯರವರು	...	,,
೧೦.	ಸಹಾಯಕ ಶಿಕ್ಷಣಾಧಿಕಾರಿಗಳು	...	,,
೧೧.	ಸಹಾಯಕ ಪಶು ವೈದ್ಯರು	...	,,
೧೨.	ಅರಣ್ಯ ವಲಯಾಧಿಕಾರಿಯವರು	...	,,
೧೩.	ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು	...	,,
೧೪.	ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಧ್ಯಕ್ಷರುಗಳು	...	,,
೧೫.	ವೈದ್ಯಾಧಿಕಾರಿಯವರು	...	,,

(The Resolution was negatived).

(iii) re : Providing Rs. 10 crores for Minor Irrigation Works in Budget for 1975-76.

MR. DEPUTY SPEAKER.—Next resolution. Sri Lingareddy to move. But he is not here. Next resolution Sri G. Puttaswamy to move.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ನನ್ನ ನಿರ್ಣಯ ಈ ರೀತಿ ಇದೆ :—

"ಸಣ್ಣ ನೀರಾವರಿ ಕಾರ್ಯಕ್ರಮಗಳಿಗಾಗಿ ೧೯೭೫-೭೬ನೇ ಸಾಲಿನ ಆಯವ್ಯಯ ಮುಂಗಡ ಪತ್ರದಲ್ಲಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಸರ್ಕಾರದವರಿಗೆ ಈ ಸಭೆಯವರು ಶಿಫಾರಸು ಮಾಡುತ್ತಾರೆ".

ಉಪಾಧ್ಯಕ್ಷರು.—ಶ್ರೀ ಪುಟ್ಟಸ್ವಾಮಿಯವರ ನಿರ್ಣಯ ಸಭೆಯಮುಂದೆ ಮಂಡಿಸಲಾಗಿದೆ. ಅದು ಈರೀತಿ ಇದೆ :—

"ಸಣ್ಣ ನೀರಾವರಿ ಕಾರ್ಯಕ್ರಮಗಳಿಗಾಗಿ ೧೯೭೫-೭೬ನೇ ಸಾಲಿನ ಆಯವ್ಯಯ ಮುಂಗಡದ ಪತ್ರದಲ್ಲಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಸರ್ಕಾರದವರಿಗೆ ಈ ಸಭೆಯವರು ಶಿಫಾರಸು ಮಾಡುತ್ತಾರೆ."

SRI S. BANGARAPPA.—On a point of order. Resolution No. 2 is similar to resolution No. 5 sent by Sri T. R. Shamm.nna The convention is if a resolution is similar, the other Hon. Member who has sent it can move it.

MR. DEPUTY SPEAKER.—It has to come by the order of ballot If the hon. member in whose name the resolution stands has authorised him, then he can move. The rules are clear. Sri G. Puttaswamy to continue.